08 August 2026 Saturday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

**ಭಾವನಾಂತರಂಗ**

ಸಮಯ ಮತ್ತು ಪ್ರಾಣ ಇವೆರಡು ಒಂದು ಸಲ ಹಾರಿ ಹೋದರೆ, ಮತ್ತೇ ಅದೇ ಗೂಡು ಸೇರುವುದಿಲ್ಲ!

-ಸ್ನೇಹಾ ಆನಂದ್



ಹೆದ್ದಾರಿಯಲ್ಲಿ ಟಾಯ್ಸ್ ಪಾರ್ಕ್, ಪ್ರಯಾಣಿಕರ ಸೌಲಭ್ಯ: ಮನವಿ ಪುಟ ಸಂ. 2



ರಾಜ್ಯ ರೈತ ಸಂಘದ ಪದಾಧಿಕಾರಿಗಳಿಂದ ಪ್ರತಿಭಟನೆ ಪುಟ ಸಂ. 3



ಹರವೆಯಲ್ಲಿ ಗೋಶಾಲೆ ತೆರೆಯುವಂತೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 245 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಸಂಪುಟದಲ್ಲಿ ಮತ್ತೆ ಬದಲಾವಣೆ!

## ಕೆಲವು ಸಚಿವರ ರಾಜೀನಾಮೆ ಸುಳಿವು ನೀಡಿದ ಸಿಎಂ ಡಿಕೆಶಿ



**ಬೆಂಗಳೂರು:** ಸಚಿವ ಸಂಪುಟದಲ್ಲಿ ಕೆಲವು ಸಣ್ಣ ಬದಲಾವಣೆಗಳಾಗಲಿವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುನ್ಸೂಚನೆ ನೀಡಿದರು. ಈ ಮೂಲಕ ಕೆಲವು ಸಚಿವರು ರಾಜೀನಾಮೆ ನೀಡುತ್ತಾರೆ ಎಂಬ ವಿಚಾರಕ್ಕೆ ಪುಷ್ಟಿ ಸಿಕ್ಕಿದಂತಾಗಿದೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಸಚಿವ ಸ್ಥಾನ ಸಿಗದೆ ಅಸಮಾಧಾ ನಗೊಂಡಿರುವ ಹಿರಿಯ ಶಾಸಕ ಎಂ. ಕೃಷ್ಣಪ್ಪ ವಿಚಾರವಾಗಿ ಮಾತನಾಡಿದ ಸಿಎಂ, ಅವರು ಸಚಿವ ಸ್ಥಾನ ಕೇಳುತ್ತಿದ್ದಾರೆ, ಕೇಳುವುದರಲ್ಲಿ ತಪ್ಪೇನೂ ಇಲ್ಲ. ಯಾರೂ ಬೇಜಾರಾಗಿಲ್ಲ, ಹಿರಿಯರಿದ್ದಾರೆ. ಅವರಿಗೆ ಬೇರೆ ಜವಾಬ್ದಾರಿಗಳನ್ನು ನೀಡಬೇಕಾಗುತ್ತದೆ. ಮಹಿಳಾ ಸಚಿವರ ಸೇರ್ಪಡೆ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ಮಾಧ್ಯಮಗಳಿಗೆ ತಿಳಿಸಿಯೇ ಮಾಡುತ್ತೇವೆ ಎಂದು ಹೇಳಿದರು.

ಖಾತೆ ಹಂಚಿಕೆ ವಿಳಂಬದಿಂದಾಗಿ ಸದನದಲ್ಲಿ ಹೊಸ ಸಚಿವರ ತಯಾರಿಗೆ ಅಡ್ಡಿಯಾಗಲಿದೆ ಎಂಬ ವಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಖಾತೆ ಹಂಚಿಕೆಗೆ ಇನ್ನೂ ಸಮಯವಿದೆ. ಆಗಸ್ಟ್ 15ರವರೆಗೆ ಕಾಲಾವಕಾಶವಿದೆ. 13ರಂದು ಸಂತಾಪ ಸೂಚನೆ ಹಾಗೂ 14ರಂದು ನೂತನ ಸಚಿವರ ಪರಿಚಯ ಕಾರ್ಯಕ್ರಮ ಇರಲಿದೆ ಎಂದರು. ಯಡಿಯೂರಪ್ಪ ಎಷ್ಟು ದಿನ ಒಬ್ಬರೇ ಸಿಎಂ ಆಗಿರಲಿಲ್ಲ? ಎಷ್ಟು ದಿನ ದೆಹಲಿಯಲ್ಲೇ ಉಳಿದುಕೊಂಡಿರಲಿಲ್ಲ? ನಮ್ಮದು ಅಷ್ಟು ದಿನ ಆಗಲ್ಲ. ಶೀಘ್ರವೇ ಖಾತೆ ಹಂಚಿಕೆ ಆಗಲಿದೆ ಎಂದು ಬಿಜೆಪಿ ನಾಯಕರಿಗೆ ಸಿಎಂ ಡಿ.ಕೆ ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸಚಿವ ನಾಗೇಂದ್ರ ವಿಚಾರದಲ್ಲಿ ಬಿಜೆಪಿ ಹೋರಾಟ ಮಾಡುವ ಕುರಿತು ಪ್ರತಿಕ್ರಿಯಿಸಿ, ಅವರು ಹೋರಾಟ ಮಾಡಿಕೊಳ್ಳಲಿ ಎಂದರು. ತಮ್ಮ ಮಧ್ಯೆ ಬೇಸ ರವಿದೆ ಎಂಬ ವರದಿಗಳನ್ನು ತಳ್ಳಿ ಹಾಕಿದ ಸಿಎಂ, ನನಗೇನೂ ಬೇಸರವಾಗಿಲ್ಲ, ನಿಮಗೇನಾ ದರೂ ಬೇಸರವಾಗಿದೆಯೇ? ಎಂದು ಪ್ರಶ್ನಿಸಿದರು.



## ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧ!

### ಸಚಿವ ಎಚ್.ಸಿ.ಬಾಲಕೃಷ್ಣ ಅಚ್ಚರಿ ಹೇಳಿಕೆ



**ಬೆಂಗಳೂರು:** ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃ ತ್ವದ ಸಚಿವ ಸಂಪುಟ ವಿಸ್ತರಣೆ ಬೆನ್ನಲ್ಲೇ ಕಾಂಗ್ರೆಸ್ ನಲ್ಲಿ ಅಸಮಾಧಾನ ಭುಗಿಲೆದ್ದಿದೆ. ನಾಯಕರ ಮನ ವೊಲಿಕೆ ನಂತರ ಹಲವು ಶಾಸಕರು ತಣ್ಣಗಾದರು. ಆದರೆ, ವಿಜಯನಗರ ಶಾಸಕ ಎಂ.ಕೃಷ್ಣಪ್ಪ ತಮಗೆ ಸಚಿವ ಸ್ಥಾನ ಕೊಡಲೇಬೇಕು ಎಂದು ಪಟ್ಟುಹಿಡಿದಿದ್ದಾರೆ. ಕೃಷ್ಣಪ್ಪ ಅವರನ್ನು ಸಮಾಧಾನ ಪಡಿಸಲು ಖುದ್ದು ಮುಖ್ಯಮಂತ್ರಿ ಡಿಕೆ ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಕೆ.ಹರಿಪ್ರಸಾದ್ ಭೇಟಿ ನೀಡಿ ಮಾತು ಕತೆ ನಡೆಸಿದರೂ ಯಾವುದೇ ಪ್ರಯೋಜನ ಆಗಿಲ್ಲ. ಹಲವು ಹುದ್ದೆಗಳನ್ನು ಆಫರ್ ಮಾಡಿದ್ದರೂ ಒಪ್ಪುತ್ತಿಲ್ಲ.

ಹೀಗಾಗಿ ಕೃಷ್ಣಪ್ಪ ಅವರನ್ನು ಸಮಾ ಧಾನ ಪಡಿಸಲು ಒಬ್ಬರು ಸಚಿವ ಸ್ಥಾನ ತ್ಯಾಗ ಮಾಡಬೇಕಾದ ಅನಿವಾರ್ಯತೆ ಸೃಷ್ಟಿ ಯಾಗಿದೆ ಎನ್ನಲಾಗಿದೆ. ಇದರ ಬೆನ್ನಲ್ಲೇ ಸಚಿವ ಎಚ್.ಸಿ ಬಾಲಕೃಷ್ಣ ಅವರು ನಾನು ರಾಜೀನಾಮೆಗೆ ಸಿದ್ಧ ಎಂದು ಹೇಳಿ ದ್ದಾರೆ. ರಾಜಕೀಯ ವಲಯದಲ್ಲಿ ಈ ಮಾತು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಮಾಗಡಿ ಶಾಸಕ ಬಾಲಕೃಷ್ಣ ಅವರಿಗೆ ಮೊದಲ ಬಾರಿ ಸಚಿವ ಸ್ಥಾನ ಸಿಕ್ಕಿದ್ದರೂ

ಪುಟ 2ಕ್ಕೆ

## 14ರಂದು ಸಭಾಪತಿ ಆಯ್ಕೆ

**ಬೆಂಗಳೂರ:** ವಿಧಾನ ಪರಿಷತ್ ಸಭಾಪತಿ ಸ್ಥಾನ ವನ್ನು ಬಸವರಾಜ ಹೊರಟ್ಟಿ ಅವರು ಅತ್ಯಂತ ಘನತೆಯಿಂದ ನಿಭಾಯಿಸಿಕೊಂಡು ಬಂದಿ ದ್ದಾರೆ. ಆ ಹುದ್ದೆಗೆ ಅವರು ನೀಡಿದಷ್ಟು ಗೌರ ವವನ್ನು ಬೇರೆ ಯಾರೂ ನೀಡಿಲ್ಲ. ಹಾಗಾಗಿ, ನಾವು ಸಹ ಅವರಿಗೆ ಅಷ್ಟೇ ಆದರದಿಂದ ಬೀಳ್ಕೊಡುಗೆ ನೀಡಲಿದ್ದೇವೆ. ಸೌಹಾರ್ದಯುತವಾಗಿ ರಾಜೀ ನಾಮೆ ನೀಡುವುದು ಅವರ ಆಸೆಯಾಗಿದೆ. ಅವರ ಈ ಭಾವನೆಯನ್ನು ನಾವು

ಪುಟ 2ಕ್ಕೆ

## ಸಭಾಪತಿ ಹೊರಟ್ಟಿ ರಾಜೀನಾಮೆ

### ಸಿಎಂ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಚರ್ಚೆ ಬಳಿಕ ತೀರ್ಮಾನ



**ಬೆಂಗಳೂರು:** ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ಬಸವರಾಜ ಹೊರಟ್ಟಿ ಅವರು ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದಾರೆ. ಹೊರಟ್ಟಿ ಅವರು ರಾಜೀನಾಮೆ ನೀಡಿದ ತಕ್ಷಣವೇ ಸರ್ಕಾರ ಅಂಗೀಕರಿಸಿದೆ.

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ರಾಜೀನಾಮೆ ನೀಡುವಂತೆ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಹೊರಟ್ಟಿ ಈ ನಿರ್ಧಾರ ಕೈಗೊಂಡಿದ್ದಾರೆ. 75 ಸದಸ್ಯ ಬಲದ ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದಿರುವ ಹಿನ್ನೆಲೆಯಲ್ಲಿ, ಸಭಾಪತಿ ಮತ್ತು ಉಪಸಭಾಪತಿ ಎರಡೂ ಹುದ್ದೆಗಳನ್ನು ತನ್ನ ವಶಕ್ಕೆ ಪಡೆಯಲು ಆಡಳಿತಾರೂಢ ಕಾಂಗ್ರೆಸ್ ಮುಂದಾಗಿದೆ. ಈ ರಾಜಕೀಯ ಬೆಳವಣಿಗೆಯ ನಡುವೆಯೇ ಬಸವರಾಜ ಹೊರಟ್ಟಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಈ ಮೊದಲು ಮುಂಗಾರು ಅಧಿವೇಶನ ಆರಂಭವಾದ ಬಳಿಕ ಅಂದರೆ ಆಗಸ್ಟ್ 14ರಂದು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಬಸವರಾಜ ಹೊರಟ್ಟಿ ತಿಳಿಸಿದ್ದರು. ಈಗ ಯಾವುದೇ ಒತ್ತಡವಿಲ್ಲದೆ, ಸಂಪೂರ್ಣ ಸ್ವಇಚ್ಛೆಯಿಂದಲೇ ತಾವು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಹೊರಟ್ಟಿ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ. ನೂತನ ಸಭಾಪತಿ ಆಯ್ಕೆಯಾಗುವವರೆಗೆ ಬಸವರಾಜ ಹೊರಟ್ಟಿ ಅವರೇ ಹಂಗಾಮಿ ಸಭಾಪತಿಯಾಗಿ ಕಾರ್ಯನಿರ್ವಹಿಸಲಿದ್ದಾರೆ

## ಸಿಎಂ ಭೇಟಿ: ಸಿಟ್ಟಿನಿಂದ ಹೊರನಡೆದ ಹೊರಟ್ಟಿ!

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶುಕ್ರವಾರ ಭೇಟಿಯಾಗಿ ಕೆಲಕಾಲ ಚರ್ಚೆ ನಡೆಸಿದರು. ಆನಂತರ ಸಿಎಂ ನಿವಾಸದಿಂದ ಸಿಡಿಮಿಡಿಗೊಂಡು ಹೊರಬಂದ ಅವರು ಅಸಮಾಧಾನದಿಂದಲೇ ಹೊರನಡೆದರು. ಸಿಎಂ ಡಿಕೆಶಿಯನ್ನು ಶುಕ್ರವಾರ ಹೊರಟ್ಟಿ ಮತ್ತೆ ಭೇಟಿಯಾಗಿದ್ದರು. 10 ನಿಮಿಷಗಳ ಕಾಲ ಸಿಎಂ ಜೊತೆ ಮಾತುಕತೆ ನಡೆಸಿದರು. ಅಸಮಾಧಾನದಿಂದಲೇ ಸಿಎಂ ಮನೆಯಿಂದ ಹೊರಬಂದರು. ಹೊರಟ್ಟಿ ಅವರನ್ನು ಬೀಳ್ಕೊಡಲು ಗೇಟ್ ವರೆಗೂ ಮುಖ್ಯಮಂತ್ರಿ ಹೊರಬಂದಿದ್ದರು. ಈ ವೇಳೆ ಸಿಟ್ಟಲ್ಲಿದ್ದ ಹೊರಟ್ಟಿ ಹಿಂದೆ ತಿರುಗಿ ಸಹ ಸಿಎಂ ಡಿಕೆಯನ್ನೂ ನೋಡದೆ ಕಾರಿನಲ್ಲಿ ಹೊರಟರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಹೊರಟ್ಟಿ, ಏನೂ ಮಾತಾಡಿಲ್ಲ. ಬೇರೆ ವಿಷಯ ಮಾತಾಡಿದ್ದೇನೆ. ಮೊನ್ನೆ ಏನು ಹೇಳಿದ್ದೇನೋ ಅದಕ್ಕೆ ಬದ್ಧ ಆಗಿದ್ದೇನೆ. ಅವಿಶ್ವಾಸ ನಿರ್ಣಯ ಮಂಡಿಸಿದರೆ ಮಂಡಿಸಲಿ. ಕಾನೂನು ಪ್ರಕಾರ ಏನು

ಪುಟ 2ಕ್ಕೆ



**ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕಡಕೊಳ**

ಮೈಸೂರು ಜಿಲ್ಲೆ – 571311 , ದೂ: 0821–2970319

ಇ–ಮೇಲ್: itstaff ulb kadakola@yahoo.com

ಸಂ.: ಪಪಕ/ತಾ.ಶಾ/ಟೆ.ಪ್ರ/ಸಿ.ಆರ್ 01/2026–27 ದಿನಾಂಕ: 04.08.2026

**ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬಾಡಿಗೆ ಆಧಾರದ ಮೇಲೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು https://kppp.karnataka.gov.in ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರುದಾರರು ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿನಾಂಕ: **21.08.2026ರ ಸಂಜೆ 5.30 ಗಂಟೆಯವರೆಗೆ. 2)** ಟೆಂಡರ್ ತೆರೆಯುವ **ದಿನಾಂಕ: 24.08.2026 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

| ಕ್ರ. ಸಂ. | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | DMA/2026-27/SE8268 | 5.00 | 12500/- |
| 2 | DMA/2026-27/SE8267 | 5.00 | 12500/- |

**ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ, ಹೆಚ್ಚಿನ ವಿವರಗಳಿಗೆ ಸರಬರಾಜುದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–
ಆಡಳಿತಾಧಿಕಾರಿ
ಪಟ್ಟಣ ಪಂಚಾಯಿತಿ, ಕಡಕೊಳ

ಸಹಿ/–
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಕಡಕೊಳ

DIPR/MYS/551/SA/2026-27



**PUBLIC NOTICE**

The Public at large is hereby notified that I **K.R.Boregowda S/o Ramegowda,** Residing at No.3173, 1st Cross, 2nd Stage, Vijayanagar, Mysore-570 017 **(Phone No.99005 68590)** intend to purchase the below mentioned Schedule Property for a valuable consideration from its absolute owner **Sairam Dwellings Pvt. Ltd,** represented by its Directors **Sri S.Deepak and Sri Ashwin.V,** (hereinafter referred as "Owners"). The Owner claims that, their right are free from all encumbrances, charges, claims etc., of whatsoever nature and that, they have a clear and marketable title with respect to the Schedule Property. All or any persons including any Banks, Financial Institutions or any other party or persons, having any valid and legal claim, right, title, demand or interest by virtue of any sale, gift, lease, tenancy, licence, exchange, partition, mortgage, charge, lein, inheritance, succession, trust, maintenance, possession, easement, power of attorney, agreement, lis-pendence, stay order, attachment, decree, specific performance or otherwise or any other right of whatsoever nature are required / called upon to convey their objection/s in writing at the address mentioned above within Seven (7) days from issuance of this public notice. Failing which it will be presumed by me that (a) there are no Power of Attorney holders, (b) there are no claim/s, lein/s, objection/s, mortgages, charges, etc., (c) if any, the same is / are deemed to have been waived and abandoned in respect of the Schedule Property and I will be obliged to proceed with the execution and Registration of the Sale Agreement and Absolute Sale Deed as if there are no valid claim/s, lein/s, objection/s, mortgages, charge/s, etc., subsisting against the Schedule Property.

**SCHEDULE**

**Item No.1: -**

All that piece and parcel of the Property bearing No.8951796573, Site No.26, measuring East to West 12.00 Meters and North to South 20.00 Meters, in total measuring 240.00 Square Meters, situated at Kergalli Village, Jayapura Hobli, Mysore Taluk, within the limits of Pattana Panchayath, Bogadi, in the layout formed and developed in converted land for Residential purpose bearing Sy No.232/4, measuring 1 acre 28 guntas and Sy No.232/2A1, measuring 12 guntas, in total measuring 2 acres of Kergalli Village, bounded on the;

**East by : Site No.27** **West by : Site No.25**
**North by : Site No.20 and 21** **South by : Road**

**Item No.2: -**

All that piece and parcel of the Property bearing No.6741300004, Site No.25, measuring East to West 12.00 Meters and North to South 20.00 Meters, in total measuring 240.00 Square Meters, situated at Kergalli Village, Jayapura Hobli, Mysore Taluk, within the limits of Pattana Panchayath, Bogadi, in the layout formed and developed in converted land for Residential purpose

**M.U.Subbaiah - Advocate & Consultant**
No. 66/1-B1, 1st Floor, 5th Cross, 3rd Main, Opp. R.K. Medicals,
Saraswathipuram, Mysuru 570 009, Karnataka.
M: 94482 08441 | R: 0821-241 5557 | E: musubbaiah@yahoo.co.in


# ನೂರಾರು ಜನರಿಗೆ ಸಿಹಿ ವಿತರಣೆ




ಮೈಸೂರು: ಡಿ. ಬನುಮಯ್ಯ ಕಾಲೇಜಿನ ವೃತ್ತದ ಗೆಳೆಯರ ಬಳಗದ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ಕಡೆ ಆಷಾಢ ಶುಕ್ರವಾರದ ಅಂಗವಾಗಿ ನೂರಾರು ಜನರಿಗೆ ಸಿಹಿ ವಿತರಿಸಲಾಯಿತು.

ಆಷಾಢ ಶುಕ್ರವಾರದ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸುವ ಮೂಲಕ ಹಬ್ಬದ ಸಂಭ್ರಮವನ್ನು ಹಂಚಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಖ್ಯಾತ ವಕೀಲರಾದ ನಟರಾಜ್, ಪೇಪರ್ ಸುಂದರ್, ಟಿ.ಎಸ್. ಅರುಣ್, ರವಿ ಪ್ರಸಾದ್, ಮಹದೇವ್, ಶ್ರೀಧರ್, ಮಂಜೇಶ್, ಸೋಮಣ್ಣ, ಬಸವರಾಜು, ನಿಂಗರಾಜು ಸೇರಿದಂತೆ ಗೆಳೆಯರ ಬಳಗದ ಸದಸ್ಯರು ಹಾಗೂ ಇತರರು ಉಪಸ್ಥಿತರಿದ್ದರು. ಪ್ರತಿ ವರ್ಷವೂ ಆಷಾಢ ಶುಕ್ರವಾರದಂದು ಸಾರ್ವಜನಿಕರಿಗೆ ಸಿಹಿ ವಿತರಿಸುವ ಮೂಲಕ ಸಾಮಾಜಿಕ ಹಾಗೂ ಧಾರ್ಮಿಕ ಸೇವಾ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿರುವ ಗೆಳೆಯರ ಬಳಗದ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

# ನರಸಿಂಹಸ್ವಾಮಿಗೆ ಪ್ರಶಸ್ತಿ ಖಂಡನೀಯ

ಮಂಡ್ಯ: ಮಿಮ್ಸ್‌ನಲ್ಲಿ ಭ್ರಷ್ಟಾಚಾರ ಎಸಗಿರುವ ಪ್ರಭಾರ ನಿರ್ದೇಶಕ ಡಾ.ಪಿ.ನರಸಿಂಹಸ್ವಾಮಿ ಅವರಿಗೆ ಉತ್ತಮ ಸೇವಕ ಪ್ರಶಸ್ತಿ ನೀಡುವುದು ಖಂಡನಾರ್ಹ. ಅವರು ಸರ್ಜರಿ ವಿಭಾಗದ ಮುಖ್ಯಸ್ಥರಾಗಿ ನೀಡಿರುವ ಸೇವೆ ಸಂಬಂಧ ಶ್ವೇತಪತ್ರ ಹೊರಡಿಸುವಂತೆ ಸಾಮಾಜಿಕ ಕಾರ್ಯಕರ್ತ ಎಚ್.ಎಸ್.ಸಾಗರ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಿಮ್ಸ್ ಪ್ರಭಾರ ನಿರ್ದೇಶಕರು ಆಸ್ಪತ್ರೆಯಲ್ಲಿ ವ್ಯಾಪಕ ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಹಣ ದುರ್ಬಳಕೆ ಹಾಗೂ ಕರ್ತವ್ಯ ಲೋಪ ಎಸಗಿದ್ದಾರೆ. ಇದರಲ್ಲಿ ಮಿಮ್ಸ್ ಆಡಳಿತ ಮಂಡಳಿಯ ಕಚೇರಿ ಅಧೀಕ್ಷಕ ಬಿ.ಕೆ.ಚಂದ್ರಶೇಖರ್ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ಮಿಮ್ಸ್‌ನಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ 20ಕ್ಕೂ ಹೆಚ್ಚು ಲೋಕಾಯುಕ್ತ ಪ್ರಕರಣಗಳು ದಾಖಲಾಗಿದ್ದು, ಆ ಪೈಕಿ 9 ಗಂಭೀರ ಪ್ರಕರಣಗಳನ್ನು ದಾಖಲೆ ಸಹಿತ ಸಲ್ಲಿಸಲಾಗಿದೆ. ಲೋಕಾಯುಕ್ತ ಅಧಿಕಾರಿಗಳ ದಿಢೀರ್ ಭೇಟಿ ಸಂದರ್ಭದಲ್ಲಿ ವಾರ್ಡ್‌ಗಳಲ್ಲಿ ಅವಧಿ ಮುಗಿದ ಮಾತ್ರೆಗಳು, ಕಲುಷಿತ ನೀರು, ಹುಳು ಬಿದ್ದ ಬ್ರೆಡ್ ಹಾಗೂ ಬನ್ ಪತ್ತೆಯಾಗಿದ್ದವು ಎಂದು ಹೇಳಿದರು. ಬಿಲ್ಲಿಂಗ್ ಕೌಂಟರ್‌ನಲ್ಲಿ ರೂ.1.50 ಲಕ್ಷ ನಗದು ಕಳುವಾಗಿದ್ದರೂ ಸಿಸಿಟಿವಿ ದೃಶ್ಯಾವಳಿ ಇದ್ದರೂ ಕಳ್ಳರನ್ನು ಹಿಡಿಯದೆ ಸಿಬ್ಬಂದಿಗಳನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಕೆಟಿಪಿಪಿ 4ಟಿ ವಿನಾಯಿತಿ ಅಡಿಯಲ್ಲಿ ನಿಯಮಬಾಹಿರವಾಗಿ ನಿಯಮ ಉಲ್ಲಂಘಿಸಿ ರೂ.7.50 ಲಕ್ಷ ಹಾಗೂ ಬೃಹತ್ ಮೊತ್ತದ ಔಷಧಿ ಖರೀದಿಯಲ್ಲಿ ಕಮಿಷನ್ ದಂಧೆ ನಡೆದಿದೆ. ರೂ7.65 ಲಕ್ಷ ವೆಚ್ಚದಲ್ಲಿ ನರ್ಸ್‌ಗಳ ಕ್ಯಾಂಟೀನ್ ನಿರ್ಮಿಸಿ 3 ವರ್ಷಗಳಾದರೂ ಬಳಕೆಗೆ ನೀಡಿಲ್ಲ. ರೂ13 ಕೋಟಿ ಅಂದಾಜು ವೆಚ್ಚದ ಕ್ಯಾನ್ಸರ್ ಆಸ್ಪತ್ರೆ ಕಟ್ಟಡದ ವೆಚ್ಚವನ್ನು ರೂ20 ಕೋಟಿಗೆ ಏರಿಸಿದ್ದರೂ 10 ವರ್ಷಗಳಿಂದ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ದೂರಿದರು. ಹೀಗೆ ನಾನಾ ಆರೋಪಗಳು ಇವರ ಮೇಲಿದ್ದು, ಇವರಿಗೆ ನೀಡಲಾಗುವ ಉತ್ತಮ ಆಡಳಿತಗಾರ ಪ್ರಶಸ್ತಿಯನ್ನು ಹಿಂಪಡೆಯಬೇಕು. ಬೇರೆಡೆಗೆ ಇವರನ್ನು ವರ್ಗಾಯಿಸಿ ಭ್ರಷ್ಟಾಚಾರ ಸಂಬಂಧ ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ರೈತ ಸಂಘದ ಮಂಡ್ಯ ತಾಲೂಕು ಅಧ್ಯಕ್ಷ. ಅಣ್ಣಯ್ಯ, ಚಲುವೇಗೌಡ, ಜಯರಾಂ ಇದ್ದರು.




## ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಟಾಯ್ಸ್ ಪಾರ್ಕ್, ಪ್ರಯಾಣಿಕರ ಸೌಲಭ್ಯ

# ಕೇಂದ್ರ ಸಚಿವರ ಸಕರಾತ್ಮಕ ಸ್ಪಂದನೆ

## ನಿತಿನ್ ಗಡ್ಕರಿ ಅವರನ್ನು ಭೇಟಿಯಾದ ಸಂಸದ ಡಾ.ಸಿ.ಎನ್.ಮಂಜುನಾಥ್ ಮನವಿ

ರಾಮನಗರ: ಮೈಸೂರು – ಬೆಂಗಳೂರು ಎಕ್ಸ್‌ಪ್ರೆಸ್ ರಸ್ತೆಯಲ್ಲಿ ಊಟ, ವಿಶ್ರಾಂತಿ ವ್ಯವಸ್ಥೆ, ಟಾಯ್ಸ್ ಪಾರ್ಕ್, ಸಿಲ್ಕ್ ಮ್ಯೂಸಿಯಂ ಮುಂತಾದವುಗಳನ್ನು ಕಲ್ಪಿಸುವುದು ಅವಶ್ಯಕತೆ ಇದೆ. ಈ ವಿಚಾರದಲ್ಲಿ ತಾವು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಬೇಟಿ ಮಾಡಿ ಗಮನ ಸೆಳೆದಿದ್ದೇನೆ. ತಮ್ಮ ಮನವಿಗೆ ಸಚಿವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆಯೊಂದನ್ನು ಅವರು ಬಿಡುಗಡೆ ಮಾಡಿದ್ದಾರೆ. ಚನ್ನಪಟ್ಟಣ ಖ್ಯಾತಿಯ ಬೊಂಬೆಗಳ ಪ್ರದರ್ಶನ, ಮಾರಟಕ್ಕೆ ಅನುಕೂಲವಾಗುವಂತೆ ಟಾಯ್ಸ್ ಪಾರ್ಕ್, ರೇಷ್ಮೆ ಕುರಿತ ಸಿಲ್ಕ್ ಮ್ಯೂಸಿಯಂ ಹಾಗೂ ವೇಸೈಡ್ ಅಮೆನಿಟೀಸ್ (ವಿಶ್ರಾಂತಿ ಕೇಂದ್ರ) ಯೋಜನೆಗಳನ್ನು ಶೀಘ್ರವಾಗಿ ಜಾರಿಗೊಳಿಸುವಂತೆ ಮನವಿ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ. ಈ ಯೋಜನೆಗಳ ಅನುಷ್ಠಾನಕ್ಕಾಗಿ ತಾವು ನಿರಂತರ ಪ್ರಯತ್ನ ಪಡಲಾಗುತ್ತಿದೆ. ಜತೆಗೆ ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿಗಳಿಗೆ ಸೂಕ್ತ ಸ್ಥಳ ಗುರುತಿಸಲು ಸೂಚಿಸಲಾಗಿತ್ತು. ಅದರಂತೆ ಅವರು ಸುಮಾರು 8.5 ಎಕರೆ ಸೂಕ್ತ ಜಾಗವನ್ನು ಗುರುತಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.



### ಭೂಸ್ವಾಧೀನಕ್ಕೆ 2 ಕೋಟಿ ರೂ ವೆಚ್ಚ

**ತಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಅವರು 2 ಕೋಟಿ ರೂ ವೆಚ್ಚದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಅನುಮೋದನೆ ನೀಡಿದ್ದಾರೆ. ಈ ಸಂಬಂಧಿತ ಅಧಿಕಾರಿಗಳಿಗೆ ಭೂಸ್ವಾಧೀನ ಹಾಗೂ ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿರುವುದಾಗಿ ಹೇಳಿದ್ದಾರ**

### ಆಟಿಕೆ ಉದ್ಯಮಕ್ಕೆ ಚೈತನ್ಯ

ಪ್ರಸ್ತಾವಿತ ಚನ್ನಪಟ್ಟಣ ಟಾಯ್ಸ್ ಪಾರ್ಕ್ ವಿಶ್ವ ಪ್ರಸಿದ್ಧ ಚನ್ನಪಟ್ಟಣದ ಮರದ ಆಟಿಕೆ ಉದ್ಯಮಕ್ಕೆ ಹೊಸ ಚೈತನ್ಯ ನೀಡಲಿದ್ದು, ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಉತ್ತೇಜನ, ಉದ್ಯೋಗ ಸೃಷ್ಟಿ ಹಾಗೂ "ಗೊಂಬೆ ನಾಡು" ಎಂಬ ಹೆಗ್ಗಳಿಕೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

### ರೇಷ್ಮೆ ಪರಂಪರೆ ಪರಿಚಯ

**ಸಿಲ್ಕ್ ಮ್ಯೂಸಿಯಂ ಕರ್ನಾಟಕದ ರೇಷ್ಮೆ ಪರಂಪರೆಯನ್ನು ಜಗತ್ತಿಗೆ ಪರಿಚಯಿಸುವುದರ ಜೊತೆಗೆ, ರಾಮನಗರ ಹಾಗೂ ಸುತ್ತಮುತ್ತಲಿನ ಸಾವಿರಾರು ರೇಷ್ಮೆ ಬೆಳೆಗಾರರು, ರೀಲರ್‌ಗಳು ಮತ್ತು ಸಂಬಂಧಿತ ವಲಯಗಳಿಗೆ ಹೆಚ್ಚಿನ ಉತ್ತೇಜನ ನೀಡಿ ಪ್ರವಾಸೋದ್ಯಮಕ್ಕೂ ಹೊಸ ಆಯಾಮವನ್ನು ನೀಡಲಿದೆ. ವೇಸೈಡ್ ಅಮೆನಿಟೀಸ್ (ವಿಶ್ರಾಂತಿ ಕೇಂದ್ರ) ಬೆಂಗಳೂರುಷಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸಿ, ಸುರಕ್ಷಿತ, ಆರಾಮದಾಯಕ ಹಾಗೂ ಅನುಕೂಲಕರ ಪ್ರಯಾಣಕ್ಕೆ ನೆರವಾಗಲಿದೆ.**

**ಈ ಮಹತ್ವಾಕಾಂಕ್ಷಿ ಯೋಜನೆಗಳು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದರ ಜೊತೆಗೆ, ಸ್ಥಳೀಯ ಜೀವನೋಪಾಯವನ್ನು ಬಲಪಡಿಸಿ, ಪ್ರವಾಸೋದ್ಯಮವನ್ನು ಉತ್ತೇಜಿಸಿ, ಪ್ರದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಹೊಸ ದಿಕ್ಕನ್ನು ನೀಡಲಿವೆ. ಈ ಮಹತ್ವದ ಅಭಿವೃದ್ಧಿ ಯೋಜನೆಗಳಿಗೆ ಸಕಾರಾತ್ಮಕ ಸ್ಪಂದನೆ ನೀಡಿ ಅಗತ್ಯ ಅನುಮೋದನೆ ನೀಡಿದ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿರುವುದಾಗಿ ಡಾ.ಸಿ.ಎನ್. ಮಂಜುನಾಥ್ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಮೊದಲ ಪುಟದಿಂದ

# ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧ!

ರಾಜೀನಾಮೆ ಬಗ್ಗೆ ಮಾತಾಡಿದ್ದಾರೆ. ಪಕ್ಷ ಹೇಳಿದರೆ ತ್ಯಾಗಕ್ಕೆ ಸಿದ್ಧ ವಿದ್ದೇನೆ ಎಂದು ನೂತನ ಸಚಿವ ಬಾಲಕೃಷ್ಣ ಅವರು ಸ್ಪಷ್ಟಪಡಿಸಿದ್ದಾರೆ. ಅಲ್ಲದೇ ಅಸಮಾಧಾನಿತರು ಸಚಿವ ಸ್ಥಾನ ಕೇಳುತ್ತಿರುವುದರಲ್ಲಿ ತಪ್ಪಿಲ್ಲ ಎಂದೂ ಹೇಳಿದ್ದಾರೆ. ಅಸಮಾಧಾನಿತರ ಬಗ್ಗೆ ಮಾತನಾಡಿದ ಬಾಲಕೃಷ್ಣ ಅವರು, ಕೆಲವರನ್ನು ಸಮಾಧಾನಪಡಿಸಲಾಗಿದೆ. ಇನ್ನೂ ಕೆಲವರೊಂದಿಗೆ ಸಂಧಾನ ನಡೆಯುತ್ತಿದೆ. ಕೃಷ್ಣಪ್ಪ ಅವರು ಒಕ್ಕಲಿಗರು. ಅವರನ್ನು ಸಂಪುಟದೊಳಗೆ ಸೇರಿಸಲು ನಾನು ರಾಜೀನಾಮೆಗೂ ಸಿದ್ಧ. ಪಕ್ಷ ಹೇಳಿದರೆ ತ್ಯಾಗಕ್ಕೆ ಸಿದ್ಧವಿದ್ದೇನೆ. ನನ್ನ ಸ್ಥಾನ ಅವರಿಗೆ ಕೊಡ್ತಾರೆ ಎಂದರೆ ನನಗೆ ಅಭ್ಯಂತರ ಇಲ್ಲ ಎಂದು ಹೇಳಿದರು.

# 14ರಂದು ಸಭಾಪತಿ ಆಯ್ಕೆ

**ಸಂಪೂರ್ಣ ಗೌರವಿಸುತ್ತೇವೆ ಎಂದು ಹೇಳಿದರು.**

**ಆಗಸ್ಟ್ 14ರಂದು ಬೆಳಗ್ಗೆ ಉಪಸಭಾಪ ತಿಗಳ ಆಯ್ಕೆ ಹಾಗೂ ಸಂಜೆ ವಿಧಾನಪರಿಷತ್ ಸಭಾಪತಿಗಳ ಆಯ್ಕೆ ನಡೆಯಲಿದೆ ಎಂದು ಸಿಎಂ ತಿಳಿಸಿದರು.**

**ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚಿಸಿರುವುದಕ್ಕೆ ಬಿಜೆಪಿ ವಿರೋಧಕ್ಕೆ ತಿರುಗೇಟು ನೀಡಿದ ಸಿಎಂ, ಬಿಜೆಪಿಯವರ ಪಟ್ಟಿಯನ್ನು ನಾನು ಹೇಳಲಾ? ಹೊರಟ್ಟಿ ಅವರು ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಹೀಗಾಗಿ ಅವಿಶ್ವಾಸ ನಿರ್ಣಯದ ಪ್ರಶ್ನೆಯೇ ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು.**

## ಮೊದಲ ಪುಟದಿಂದ

### ಸಿಎಂ ಭೇಟಿ: ಸಿಟ್ಟಿನಿಂದ ಹೊರನಡೆದ ಹೊರಟ್ಟಿ!

**ಬೇಕಾದರೂ ಮಾಡಲಿ ಎಂದು ಸಿಟ್ಟಿನಿಂದ ಮಾತನಾಡಿದರು. ಆದರೆ ಕೆಲವೇ ಸಮಯದ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.**

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನೂತನ ಬಸ್ ಘಟಕ ಶಂಕುಸ್ಥಾಪನೆ

ಹನೂರು: ತಾಲೂಕು ಕೇಂದ್ರದಲ್ಲಿ ಬಹುದಿನಗಳಿಂದ ಈಡೇರದೆ ಉಳಿದಿದ್ದ ನೂತನ ಬಸ್ ಘಟಕ (ಡೆಪೋ) ನಿರ್ಮಾಣ ಕಾಮಗಾರಿಗೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು. ಒಟ್ಟು ?7.52 ಕೋಟಿ ವೆಚ್ಚದಲ್ಲಿ ಈ ಆಧುನಿಕ ಬಸ್ ಘಟಕ ನಿರ್ಮಾಣಗೊಳ್ಳುತ್ತಿದೆ.

?ಹನೂರು ತಾಲೂಕಿನ ಮಂಗಲ ಗ್ರಾಮದ ಸರ್ವೇ ನಂ 430/೦1೦ ಹಾಗೂ ಲೋಕನಹಳ್ಳಿ ಹೋಬಳಿಯ ಕಣ್ಣೂರು ಗ್ರಾಮದ ಸರ್ವೇ ನಂ 1/ಃ1 ವ್ಯಾಪ್ತಿಯಲ್ಲಿ ಲಭ್ಯವಿರುವ ಒಟ್ಟು 4 ಎಕರೆ 50 ಸೆಂಟ್ಸ್ ಜಾಗದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಏಖಖಿಅ) ಚಾಮರಾಜನಗರ ವಿಭಾಗದ ವತಿಯಿಂದ ಈ ಘಟಕವನ್ನು ನಿರ್ಮಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಶಾಸಕ ಮಂಜುನಾಥ್, ಜಿಲ್ಲಾಧಿಕಾರಿ ಶ್ರೀ ರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್, ತಹಸೀಲ್ದಾರ್ ಚೈತ್ರಾ, ಮಾಜಿ ಶಾಸಕ ನರೇಂದ್ರ, ಗುತ್ತಿಗೆದಾರರಾದ ಚಂದ್ರೆಗೌಡ ಸೇರಿದಂತೆ ಹಲವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



# ಒತ್ತುವರಿ ಜಾಗ ವಶಪಡಿಸಿಕೊಳ್ಳಿ

ಮಂಡ್ಯ: ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಹೋಬಳಿಯ ಜಕ್ಕನಹಳ್ಳಿ ಗ್ರಾಮದಲ್ಲಿರುವ ಕೆರೆ ಜಾಗವನ್ನು ಕೆಲ ವ್ಯಕ್ತಿಗಳು ಮರಳಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದು, ಅವರ ವಿರುದ್ಧ ತಕ್ಷಣವೇ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಹಿತರಕ್ಷಣಾ ಪಡೆಯ ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಮಹದೇವು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಅಂಗಡಿ ಚಾಮೇಗೌಡ ಹಾಗೂ ಚಾಮೇಗೌಡ (ಮುರುಗ) ಇತರರು ಸೇರಿ ತೆರವುಗೊಳಿಸಲಾಗಿದ್ದ ಜಾಗವನ್ನು ಮತ್ತೆ ಅಕ್ರಮವಾಗಿ ಆಕ್ರಮಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಒತ್ತುವರಿ ತಡೆಯಲು ಜೆಸಿಬಿಯಿಂದ ತೆಗೆಯಲಾಗಿದ್ದ ಟ್ರೆಂಚ್‌ಗಳನ್ನು ಮುಚ್ಚಿ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಆರೋಪಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲಾಗಿದೆ. ಈ ಪ್ರಕರಣವನ್ನು ವಿಳಂಬ ಮಾಡದೆ ಕೂಲಂಕುಷವಾಗಿ ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಪಡೆಯ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಭೀಮೇಶ ಇದ್ದರು.



## ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ನಗರದಲ್ಲಿ ಪ್ರತಿಭಟನೆ । ಬಿಡದಿ ಸಮಗ್ರ ನಗರ ನಿರ್ಮಾಣ ಯೋಜನೆ ವಿರೋಧಿಸುತ್ತಿರುವ ರೈತರಿಗೆ ಬೆಂಬಲ

# ಆ.13ರಂದು ಕರ್ನಾಟಕ ರಾಜ್ಯ ಬಂದ್‌ಗೆ ವಾಟಾಳ್ ನಾಗರಾಜ್ ಕರೆ

ರಾಮನಗರ: ಮೇಕೆದಾಟು ಯೋಜನೆ, ಮಹದಾಯಿ ಮತ್ತು ಕಳಸಾ ಬಂಡೂರಿ ಯೋಜನೆಗಳ ಅನುಷ್ಠಾನಕ್ಕೆ ಒತ್ತಾಯಿಸಿ, ಬಿಡದಿಯಲ್ಲಿ ಸಮಗ್ರ ನಗರ ನಿರ್ಮಾಣ ಯೋಜನೆ ವಿರೋಧಿಸಿ ನಡೆಯುತ್ತಿರುವ ರೈತರ ಪ್ರತಿಭಟನೆಯನ್ನು ಬೆಂಬಲಿಸಿ ಮತ್ತು ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂದು ಎಂದು ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ನಿರ್ಣಯ ಅಂಗೀಕಾರವಾಗಬೇಕು ಎಂದು ಒತ್ತಾಯಿಸಿ ಇದೇ ಆಗಸ್ಟ್ 13ರಂದು ಕರ್ನಾಟಕ ರಾಜ್ಯ ಬಂದ್ ಮಾಡುವಂತೆ ರಾಜ್ಯದ ಜನತೆಗೆ ಕರೆ ನೀಡಲಾಗಿದೆ ಎಮದು ಕನ್ನಡ ಚಳವಳಿ ವಾಟಾಳ್ ಪಕ್ಷದ ರಾಜ್ಯಾಧ್ಯಕ್ಷ ವಾಟಾಳ್ ನಾಗರಾಜ್ ಹೇಳಿದರು.

ಮೇಕೆದಾಟು ಯೋಜನೆಗೆ ಒತ್ತಾಯಿಸಿ ನಗರದ ಐಜೂರು ವೃತ್ತದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಮತ್ತು ಕರುನಾಡು ಸೇನೆವತಿಯಿಂದ ಶುಕ್ರವಾರ ನಡೆದ ಪ್ರತಿಭಟನೆಯ ವೇಳೆ ಅವರು ಮಾತನಾಡಿದರು.

ಉತ್ತರ ಕರ್ನಾಟಕ ಜಿಲ್ಲೆಗಳ ಜನತೆ ನೀರಾವರಿ ಯೋಜನೆಗಳ ಜಾರಿ ಬಗ್ಗೆ ಒತ್ತಾಯಿಸುವುದು ಮಾತ್ರವಲ್ಲಿ ಬೆಳಗಾವಿ ನಗರಪಾಲಿಕೆಯಲ್ಲಿ ಬೆಳಗಾವಿ ರಾಜ್ಯದ ಅವಿಭಾಜ್ಯ ಅಂಗ ಎಂದು ನಿರ್ಣಯ ಮಾಡಬೇಕು ಎಂಬುದನ್ನು ಆಗ್ರಹಿಸಬೇಕು ಎಂದರು.



**ಹುಡುಗಾಟದ ಮಾತು ಬೇಡ, ಸಿಎಂಗೆ ಸಲಹೆ**

ಮಳೆ ಸುರಿಯಿತು, ನೀರು ಹರಿಯಿತು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾವೇರಿ ನೀರಿನ ಕುರಿತು ಮಾತನಾಡುವುದು ಸರಿಯಲ್ಲ. ಹೀಗೆ ಹುಡುಗಾಟದ ಮಾತು ಬೇಡ. ಮಳೆ ಬಂತು ನೀರು ಹೋಯಿತು ಎನ್ನುವುದಾದರೆ, ಕಾವೇರಿ ನ್ಯಾಯಮಂಡಳಿಯ ಅವಶ್ಯಕತೆ ಇಲ್ಲ ರದ್ದು ಮಾಡಿದರೆ ಒಳಿತು. ಮಳೆ ಬಂದಾಗ ನೀರು ಹೋಗಲಿ ಎಂದರು. ನಮ್ಮ ನದಿಗಳಲ್ಲಿ ಎಷ್ಟೇ ನೀರು ಬಂದರೂ ನಾವು ಎಲ್ಲಾ ನೀರು ಶೇಖರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಮೇಕೆದಾಟು ಜಲಾಶಯ ನಿರ್ಮಾಣದ ಅವಶ್ಯಕತೆ ಇದೆ ಎಂದರು. ಪ್ರತಿಭಟನೆಯಲ್ಲಿ ಕರುನಾಡು ಸೇನೆ ರಾಜ್ಯ ಉಪಾಧ್ಯಕ್ಷ ಐಜೂರು ಎಂ. ಜಗದೀಶ್, ರಾಜ್ಯ ಉಸ್ತುವಾರಿ ಅಧ್ಯಕ್ಷ ವಿ.ಎನ್. ಗಂಗಾಧರ್, ಜಿಲ್ಲಾಧ್ಯಕ್ಷ ಸಿ.ಎಸ್. ಜಯಕುಮಾರ್, ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಪುಷ್ಪಲತಾ, ಕಾರ್ಯದರ್ಶಿ ವೆಂಕಟಲಕ್ಷ್ಮಿ, ಜಿಲ್ಲಾ ದಲಿತ ಘಟಕದ ಅಧ್ಯಕ್ಷ ಕೆ. ಜಯರಾಮು, ಯುವ ಘಟಕದ ಜಿಲ್ಲಾಧ್ಯಕ್ಷ ವಿ.ಎನ್. ಶ್ರೀನಿವಾಸ್, ತಾಲ್ಲೂಕು ಗೌರವಾಧ್ಯಕ್ಷ ಕೆಂಪರಾಜು, ಪ್ರಧಾನ ಕಾರ್ಯದರ್ಶಿ ಕುಮಾರ್, ಕಾರ್ಯಾಧ್ಯಕ್ಷ ಪಿ.ಸುರೇಶ್ ಕೊತ್ತಿಪುರ, ನಗರ ಅಧ್ಯಕ್ಷ ಪ್ರಸನ್ನ, ಮುಖಂಡರಾದ ನಾರಾಯಣಸ್ವಾಮಿ, ಮಹದೇವ್, ಪಾರ್ಥಸಾರಥಿ ಭಾಗವಹಿಸಿದ್ದರು.

### ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಕೊರತೆ

**ಕೆಆರ್‌ಎಸ್ ಜಲಾಶಯದ ನೀರನ್ನು ಕೃಷಿಗಾಗಿ ಬಳಕೆಯಾಗುತ್ತಿತ್ತು. ಈಗ ಬೆಂಗಳೂರಿಗರ ದಾಹ ತೀರಲು ಬಳಕೆಯಾಗುತ್ತಿದೆ. ಬೆಂಗಳೂರಿಗೆ ಮೂರು ಹಂತಗಳಲ್ಲಿ ನೀರು ತರಲಾಗುತ್ತಿದೆ. ಆದರೂ ಬೆಂಗಳೂರಿಗೆ ನೀರಿನ ಕೊರತೆ ಇದೆ. ಕೋಲಾರ, ತುಮಕೂರು ನಗರಗಳನ್ನು ಉಪನಗರ ಮಾಡಿದರೆ ಲಕ್ಷಾಂತರ ಜನರು ಉಪನಗರಗಳಲ್ಲಿ ಸೇರುತ್ತಾರೆ. ಆದರೆ ಅವರಿಗೆಲ್ಲ ನೀರು ಎಲ್ಲಿಂದ ತರಬೇಕು ಎಂದು ಪ್ರಶ್ನಿಸಿದರು. ಮೇಕೆದಾಟು ಯೋಜನೆಗೆ ತಮಿಳುನಾಡು ಅಡ್ಡಿಪಡಿಸುತ್ತಿದೆ. ಈ ಧೋರಣೆ ವಿರುದ್ಧ ಆ.10 ಸೋಮವಾರದಂತು ಕನ್ನಡ ಪರ ಒಕ್ಕೂಟಗಳೆಲ್ಲ ಸೇರಿ ತಮಿಳುನಾಡು ಗಡಿ ಬಂದ್ ಮಾಡಿ ಪ್ರತಿಭಟಿಸಲಿದ್ದೇವೆ. ಅಲ್ಲಿನ ಸಿಎಂ ವಿಜಯ್ ಅಥವಾ ಮಾಜಿ ಸಿಎಂ ಸ್ಟಾಲಿನ್ ಅವರ ಆಟಗಳು ಇಲ್ಲಿ ನಡೆಯಲ್ಲ. ನಮ್ಮ ಜಲಾಶಯದ ನಿರು ನಾವು ಕುಡಿಯಲು ತಮಿಳುನಾಡಿನ ಅನುಮತಿ ಅವಶ್ಯಕತೆ ಇಲ್ಲ ಎಂದರು. ತಮಿಳುನಾಡಿನ ವಾದ ನಾವು ಒಪ್ಪಲು ಸಾಧ್ಯವಿಲ್ಲ ಎಂದರು.**

### ಬಿಡದಿ ಉಪನಗರಕ್ಕೆ ನೀರು ಎಲ್ಲಿಂದ?

**ಬಿಡದಿ ಹೋಬಳಿಯಲ್ಲಿ ಉದ್ದೇಶಿತ ಸಮಗ್ರ ನಗರ ನಿರ್ಮಾಣ ಯೋಜನೆಗೆ ಭೂಸ್ವಾಧೀನಕ್ಕೆ ರೈತರು ಕಣ್ಣೀರು ಸುರಿಸುತ್ತಿದ್ದಾರೆ. ಉಪನಗರ ನಿರ್ಮಾಣವಾದರೆ ಅಲ್ಲಿಗೆ ಕುಡಿಯಲು ನೀರು ಎಲ್ಲಿಂದ ತರುತ್ತೀರಿ ಎಂದು ಸರ್ಕಾರವನ್ನು ಪ್ರಶ್ನಿಸಿದರು.**

## ಆಷಾಡ ಪ್ರಯುಕ್ತ ಸಂತೆಮರಹಳ್ಳಿಯಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ



ಸಂತೆಮರಾಹಳ್ಳಿ : ಇಲ್ಲಿನ ವೃತ್ತದಲ್ಲಿ ಶ್ರೀ ಚಾಮುಂಡೇಶ್ವರಿ ಸ್ನೇಹ ಬಳಗದ ವತಿಯಿಂದ ಕೊನೆ ಆಷಾಡ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ವಿಜೃಂಭಣೆಯಿಂದ ದೇವಿಗೆ ವಿವಿಧ ಹೂವು ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ದರ್ಶನ ಪಡೆಯಲು ಅಕ್ಕ ಪಕ್ಕದ ಗ್ರಾಮಗಳಿಂದ ಮಹಿಳೆಯರು ಸೇರಿದಂತೆ ಸರದಿ ಸಾಲಿನಲ್ಲಿ ನೂರಾರು ಸಂಖ್ಯೆಯಲ್ಲಿ ನಿಂತು ದೇವಿ ದರ್ಶನ ಪಡೆಯುವುದು ಬಹಳ ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರಿಗೆ ಅನ್ನ ಸಂತರ್ಪಣ ಕಾರ್ಯಕ್ರಮವನ್ನು ಆಯೋಜನೆ ಮಾಡುವ ವೇಳೆಯಲ್ಲಿ ಪ್ರಸಾದಕ್ಕಾಗಿ ನೂಕು ನುಗ್ಗೋಲು ಲೆಕ್ಕಿಸಿ ಪ್ರಸಾದ ಸ್ವೀಕರಿಸಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಕ್ರೀಡಾಂಗಣಗಳ ನಿರ್ವಹಣೆಗೆ ಕ್ರಮ



ಮಂಡ್ಯ: ಜಿಲ್ಲೆಯ ಕ್ರೀಡಾಂಗಣಗಳ ನಿರ್ವಹಣೆ, ಅಭಿವೃದ್ಧಿ ಹಾಗೂ ಕ್ರೀಡಾಪಟುಗಳಿಗೆ ಅಗತ್ಯ ಮೂಲಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ಸಂಬಂಧಿಸಿದ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಕ್ರೀಡಾಂಗಣಗಳ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಕ್ರೀಡಾಂಗಣಗಳ ನಿರ್ವಹಣೆ, ಸ್ವಚ್ಛತೆ, ಕುಡಿಯುವ ನೀರು, ವಿದ್ಯುತ್, ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳ ಕುರಿತು ಸಭೆಯಲ್ಲಿ ಪರಿಶೀಲನೆ ನಡೆಸಲಾಯಿತು. ಕ್ರೀಡಾಂಗಣಗಳ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ನೀಡಬಾರದು. ಕ್ರೀಡಾಪಟುಗಳಿಗೆ ಉತ್ತಮ ವಾತಾವರಣ ಕಲ್ಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕ್ರೀಡಾಂಗಣಗಳಲ್ಲಿ ಕೈಗೊಳ್ಳಬೇಕಿರುವ ಅಭಿವೃದ್ಧಿ ಕಾಮಗಾರಿಗಳು, ನಿರ್ವಹಣೆಗೆ ಅಗತ್ಯ ಅನುದಾನ, ಕ್ರೀಡಾ ಪರಿಕರಗಳ ಸಂರಕ್ಷಣೆ ಹಾಗೂ ಸಾರ್ವಜನಿಕರ ಬಳಕೆಗೆ ಕ್ರೀಡಾಂಗಣಗಳನ್ನು ಸುಸಜ್ಜಿತವಾಗಿ ಕಾಯ್ದುಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳಾದ ಮನುಜಶ್ರೀ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಜಿಲ್ಲಾ ಕ್ರೀಡಾಂಗಣಗಳ ನಿರ್ವಹಣಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ನೂತನ ಆಂಬ್ಯುಲೆನ್ಸ್‌ಗಳಿಗೆ ಚಾಲನೆ




ಮೈಸೂರು:- ಆರೋಗ್ಯ ಇಲಾಖೆಯಲ್ಲಿ ಇಂಜಿನ್ ವೈಫಲ್ಯ ಹಾಗೂ ಇನ್ನಿತರೆ ಕಾರಣಗಳಿಂದ ಆಂಬ್ಯುಲೆನ್ಸ್ ವಾಹನಗಳನ್ನು ವಿಲೇವಾರಿ ಮಾಡಲಾಗಿತ್ತು. ಆಂಬ್ಯುಲೆನ್ಸ್ ವಾಹನಗಳ ಸೇವೆಯನ್ನು ಒದಗಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೂತನವಾಗಿ ಖರೀದಿಸಲಾಗಿರುವ 8 ಆಂಬ್ಯುಲೆನ್ಸ್ ಗಳನ್ನು ಇಂದು ನಗರಾಭಿವೃದ್ಧಿ ಸಚಿವ ಡಾ: ಯತೀಂದ್ರ ಸಿದ್ದರಾಮಯ್ಯ ಅವರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಚಾಲನೆ ನೀಡಿದರು.

ಸಾರ್ವಜನಿಕರಿಗೆ ಗುಣಮಟ್ಟದ ಹಾಗೂ ಸಮಯೋಚಿತ ಆರೋಗ್ಯ ಸೇವೆ ಒದಗಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಆರೋಗ್ಯ ಸೇವೆಗಳನ್ನು ಮತ್ತಷ್ಟು ಬಲಪಡಿಸುವ ಹಾಗೂ ತುರ್ತು ಚಿಕಿತ್ಸಾ ಸೇವೆಯನ್ನು ಜನರಿಗೆ ಶೀಘ್ರವಾಗಿ ತಲುಪಿಸಲು ಆಂಬ್ಯುಲೆನ್ಸ್ ಸೇವೆ ಅತ್ಯವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೆ.ಆರ್. ನಗರದ ಶಾಸಕ ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಜಿ, ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

# ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯ

## ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳಿಂದ ಪ್ರತಿಭಟನೆ

ಗುಂಡ್ಲುಪೇಟೆ: ತಾಲೂಕಿನ ರೈತರು ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ರೈತರು ಪ್ರತಿಭಟನಾ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗಿ ತಾಲೂಕು ಕಚೇರಿ ಮುಂಭಾಗ ಜಮಾವಣೆಗೊಂಡರು. ಬಳಿಕ ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ, ಅರಣ್ಯ ಇಲಾಖೆಯಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಪಶುಸಂಗೋಪನೆ ಇಲಾಖೆಯವರು ತಾಲೂಕಿನಲ್ಲಿ ಬರ ಪರಿಸ್ಥಿತಿ ಇರುವುದರಿಂದ ಜಾನುವಾರುಗಳಿಗೆ ಮೇವು ಒದಗಿಸಿಕೊಡಬೇಕು, ಮಳೆ ಗಾಳಿಗೆ ಬಾಳೆ ಫಸಲು ನಾಶವಾಗಿ ತಿಂಗಳುಗಳೇ ಉರುಳಿದರು ಇನ್ನೂ ಯಾವುದೇ ಪರಿಹಾರ ನೀಡಿಲ್ಲ. ಇನ್ನೂ ಮುಂದಾದರೂ ರೈತರಿಗೆ ಬಾಳೆ ಬೆಳೆ ನಷ್ಟದ ಪರಿಹಾರ ನೀಡುವಂತೆ ತೋಟಗಾರಿಕೆ ಇಲಾಖೆ ಅಧಿಕಾರಿಗೆ ಒತ್ತಾಯಿಸಿದರು. ಸರ್ಕಾರದ ರೈತ ವಿರೋಧಿ ನೀತಿಗಳಿಂದ ರೈತರು ದಿನದಿಂದ ದಿನಕ್ಕೆ ಸಂಕಷ್ಟಕ್ಕೆ ಸಿಲುಕುತ್ತಿದ್ದು, ಕಳೆದ 10 ತಿಂಗಳ ಹಿಂದೆಯೇ ಜಿಲ್ಲಾಡಳಿತ ಮತ್ತು ಸರ್ಕಾರದ ಗಮನಕ್ಕೆ ಹಲವು ಸಮಸ್ಯೆಗಳನ್ನು ತಂದಿದ್ದರೂ ಯಾವುದೇ ಪರಿಹಾರ ದೊರೆತಿಲ್ಲ ಎಂದರು.



ಗುಂಡ್ಲುಪೇಟೆ ತಾಲ್ಲೂಕು ರಾಜ್ಯದ ಗಡಿಭಾಗದಲ್ಲಿರುವ ಹಿಂದುಳಿದ ಪ್ರದೇಶವಾಗಿದ್ದು, ಮಳೆಯ ಕೊರತೆ, ಪ್ರಕೃತಿ ವಿಕೋಪ, ಅಂತರ್ಜಲ ಕುಸಿತ, ಕಾಡು ಪ್ರಾಣಿಗಳ ಹಾವಳಿ ಹಾಗೂ ಕೃಷಿ ಸಂಕಷ್ಟದಿಂದ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದರೂ ಅಧಿಕಾರಿಗಳಾಲೀ, ಶಾಸಕರಾಗಲೀ ಕ್ರಮವಹಿಸುತ್ತಿಲ್ಲ ಎಂದು ಕಿಡಿಕಾರಿದರು.

ಗುಂಡ್ಲುಪೇಟೆ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು, ಬೆಳೆ ನಷ್ಟ ಪರಿಹಾರ ಹಾಗೂ ಬೆಳೆ ವಿಮೆ ಹಣವನ್ನು ತಕ್ಷಣ ರೈತರ ಖಾತೆಗೆ ಜಮಾ ಮಾಡುವುದು, ನಾಲ್ಕನೇ ಹಂತದ ಏತ ನೀರಾವರಿ ಯೋಜನೆಯ ಎಲ್ಲಾ ಕೆರೆಗಳಿಗೆ ನೀರು ಹರಿಸುವುದು, ಅಕ್ರಮ-ಸಕ್ರಮ ಯೋಜನೆಯಡಿ ಬಾಕಿ ಇರುವ ಸಾಗುವಳಿ ಹಕ್ಕುಪತ್ರಗಳನ್ನು ವಿತರಿಸುವುದು, ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಿಸಿ ಬೆಳೆ ಹಾಗೂ ಪ್ರಾಣಹಾನಿಗೆ ಸೂಕ್ತ ಪರಿಹಾರ ನೀಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು.

ಬ್ಯಾಂಕ್ ಕೃಷಿ ಸಾಲಗಳಿಗೆ ಒನ್ ಟೈಮ್ ಸೆಟಲ್ಮೆಂಟ್ (ಒಟಿಎಸ್) ಜಾರಿಗೊಳಿಸುವುದು, ಪೋಡಿ ಸಮಸ್ಯೆ ಬಗೆಹರಿಸುವುದು, ಕೃಷಿ ಯಂತ್ರೋಪಕರಣ ವಿತರಣೆಯಲ್ಲಿನ ಅಕ್ರಮಗಳ ತನಿಖೆ ನಡೆಸುವುದು, ರೈತರಿಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ಪೂರೈಕೆ ಕಲ್ಪಿಸುವುದು, ಸಾಮಾಜಿಕ ಭದ್ರತಾ ಯೋಜನೆಗಳ ಬಾಕಿ ಹಣ ಬಿಡುಗಡೆ, ಇ-ಸ್ವತ್ತು ಸಮಸ್ಯೆ ಪರಿಹಾರ, ಜಲಜೀವನ್ ಮಿಷನ್ ಕಾಮಗಾರಿಗಳ ದೋಷ ಸರಿಪಡಿಸುವುದು ಹಾಗೂ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವಂತೆ ಒತ್ತಾಯಿಸಲಾಗಿದೆ. ಈ ಹಿಂದೆ ಹಲವು ಬಾರಿ ಮನವಿ ಸಲ್ಲಿಸಿ ಹೋರಾಟ ನಡೆಸಿದರೂ ಸಮಸ್ಯೆಗಳಿಗೆ ಪರಿಹಾರ ಸಿಗದಿರುವುದರಿಂದ, ಸರ್ಕಾರ ಹಾಗೂ ಜಿಲ್ಲಾಡಳಿತ ಶೀಘ್ರ ಕ್ರಮ ಕೈಗೊಳ್ಳದಿದ್ದರೆ ತಾಲ್ಲೂಕು ಕಚೇರಿ ಎದುರು ಜಾನುವಾರುಗಳೊಂದಿಗೆ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ರೈತ ಸಂಘ ಎಚ್ಚರಿಕೆ ನೀಡಿದೆ. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ತನ್ಮಯ್ ಅವರು ರೈತರ ಮನವಿ ಸ್ವೀಕರಿಸಿ, ರೈತರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ಕ್ರಮವಹಿಸಲಾ ಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆ ಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಕುಮಾರ್ ಹಕ್ಕಲಾ ಪುರ, ಜಿಲ್ಲಾ ಉಪಾಧ್ಯಕ್ಷ ರಾಜಶೇಖರಪ್ಪ, ಮಹದೇವಸ್ವಾಮಿ, ಸೋಮಶೇಖರ್, ಶಿವಣ್ಣ, ಮಹದೇವ ಪ್ರಸಾದ್, ನಾಗರಾಜಪ್ಪ, ಸಿದ್ದಶೆಟ್ಟಿ, ಬಸಮ್ಮ, ಚಿಕ್ಕ ಸಿದ್ದಮ್ಮ, ತಾಲೂಕು ಯುವ ಘಟಕದ ಅಧ್ಯಕ್ಷ ಪ್ರವೀಣ್, ಪ್ರಧಾನ ಕಾರ್ಯದರ್ಶಿ ರಘು ಸೇರಿದಂತೆ ಇತರೆ ರೈತ ಮುಖಂಡರು ಭಾಗವಹಿಸಿದ್ದರು.

## ಗುಂಡ್ಲುಪೇಟೆಗೆ ಕೆ.ಎಸ್.ಈಶ್ವರಪ್ಪ ಭೇಟಿ



ಗುಂಡ್ಲುಪೇಟೆ:- ರಾಜ್ಯದ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಗುರುವಾರ ಗುಂಡ್ಲುಪೇಟೆ ಪಟ್ಟಣಕ್ಕೆ ಭೇಟಿ ನೀಡಿ, ಪುರಸಭೆಯ ಮಾಜಿ ಅಧ್ಯಕ್ಷ ಜಿಡಿಎಲ್ ಸುರೇಶ್ ಅವರ ನಿವಾಸಕ್ಕೆ ಆಗಮಿಸಿದರು. ಈ ವೇಳೆ ಜಿಡಿಎಲ್ ಸುರೇಶ್ ಹಾಗೂ ಮುಖಂಡರು ಈಶ್ವರಪ್ಪ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಶಾಲು ಹೊದಿಸಿ ಸನ್ಮಾನಿಸಲಾಯಿತು

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಈಶ್ವರಪ್ಪ ಅವರ ಪುತ್ರ ಕಾಂತೇಶ್, ಬಿಜೆಪಿ ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಪ್ರಧಾನ ಕಾರ್ಯದರ್ಶಿ ಮಹೇಂದ್ರ ಸೇರಿದಂತೆ ಕುರುಬ ಸಮುದಾಯದ ಹಲವು ಮುಖಂಡರು ಹಾಗೂ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

# ಗೃಹಲಕ್ಷ್ಮೀ ಪರಿಶೀಲನೆಗೆ ಅಸ್ತು

## ಎಸ್‌ಐಆರ್ ನಂತರ ಆರಂಭ: ಮಾರ್ಗಸೂಚಿ ಪ್ರಕಟ

**ಬೆಂಗಳೂರು:** ರಾಜ್ಯದಲ್ಲಿ ನಡೆಯುತ್ತಿರುವ ಎಸ್ಐಆರ್ ಮುಗಿದ ತಕ್ಷಣ ಗೃಹಲಕ್ಷ್ಮೀ ಮರುಪರಿಶೀಲನೆ ಆರಂಭವಾಗಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ.




ಗೃಹಲಕ್ಷ್ಮೀ ಮಾರ್ಗಸೂಚಿಗೆ ಸಿಎಂ ಡಿ.ಕೆ ಶಿವಕುಮಾರ್ ಒಪ್ಪಿಗೆ ಸೂಚಿಸಿದ್ದಾರೆ. ಗ್ಯಾರಂಟಿ ಅನುಷ್ಠಾನ ಸಮಿತಿ ಸಮ್ಮುಖದಲ್ಲಿ ಅರ್ಜಿ ಭರ್ತಿ ಹಾಗೂ ಮರುಪರಿಶೀಲನೆ ನಡೆಯಲಿದೆ.

ಸರ್ಕಾರ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿ ರಚನೆ ಮಾಡಿ ಆದೇಶ ಹೊರಡಿಸಿದೆ. ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜಿಲ್ಲಾಧಿಕಾರಿ, ಜಿಲ್ಲಾಮಟ್ಟದ ಸರ್ಕಾರಿ ಅಧಿಕಾರಿಗಳು, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಸಮಿತಿಯಲ್ಲಿ ತಹಶೀಲ್ದಾರ್, ತಾಲ್ಲೂಕು ಮಟ್ಟದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ಇರುತ್ತಾರೆ.

### ಪತ್ತೆಗೆ ಮಾರ್ಗಸೂಚಿ

- ಆಹಾರ ಇಲಾಖೆಯ ಡೇಟಾದಲ್ಲಿ ಲಭ್ಯವಿರುವ ಬಯೋಮೆಟ್ರಿಕ್ ದೃಢೀಕರಣ ಮೂಲಕ ಫಲಾನುಭವಿಗಳನ್ನ ಪತ್ತೆ ಹಚ್ಚಬೇಕು.
- ಪ್ರತಿ ನ್ಯಾಯಬೆಲೆ ಅಂಗಡಿಗಳ ಮೂಲಕ ಬಯೋಮೆಟ್ರಿಕ್ ಪರಿಶೀಲಿಸಿ ಗುರುತು ಹಚ್ಚಬೇಕು.
- ಆಹಾರ ಇಲಾಖೆ ಡೇಟಾ ಬೇಸ್‌ನಲ್ಲಿ ಬಯೋಮೆಟ್ರಿಕ್ ಇರುವ ಫಲಾನುಭವಿ ಬೆಂಗಳೂರು ಒನ್,
- ಗ್ರಾಮ ಒನ್ ಮತ್ತು ಕರ್ನಾಟಕ ಒನ್‌ಗಳಲ್ಲಿ ಬಯೋಮೆಟ್ರಿಕ್ ಕೊಡಬೇಕು
- ಗೃಹಲಕ್ಷ್ಮೀ ಫಲಾನುಭವಿಗಳು ಸ್ವಇಚ್ಛೆಯಿಂದ ಸೌಲಭ್ಯ ನಿರಾಕರಿಸಬಹುದು.

### ಏನೆಲ್ಲ ಮಾಹಿತಿ ಸಂಗ್ರಹ

- ಪಿಂಚಣಿದಾರರು
- ಐಟಿ ಪಾವತಿ
- ಜಿಎಸ್‌ಟಿ ಪಾವತಿ
- ಸರ್ಕಾರಿ ಸೇವೆಯ ಮಾಹಿತಿ
- ನಿವೃತ್ತಿ ಪಿಂಚಣಿ ಮಾಹಿತಿ
- ಭಾವಚಿತ್ರದ ಜೊತೆಗೆ ಮತದಾರರ ಗುರುತಿನ ಚೀಟಿ

## ಯತೀಂದ್ರ ಧರ್ಮದ ಬಗ್ಗೆ ತಾಯಿ ಕೇಳಲಿ: ಕರಂದ್ಲಾಜೆ

**ಮೈಸೂರು:** ಭಾರತ ಹಿಂದೂ ರಾಷ್ಟ್ರ ಆಗಬಾರದು ಎಂದು ಹೇಳಿರುವ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರು, ತಾವು ಯಾವ ಧರ್ಮೀಯರು ಎಂಬುದನ್ನು ತಮ್ಮ ತಾಯಿ ಬಳಿ ಕೇಳಿ ತಿಳಿದುಕೊಳ್ಳಲಿ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿರುಗೇಟು ನೀಡಿದರು.



ಚಾಮುಂಡಿಬೆಟ್ಟದಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿ, ನಾವು ಯಾರು, ನಮ್ಮ ಸಂಸ್ಕೃತಿ ಯಾವುದು, ನಮ್ಮ ಧರ್ಮ ಯಾವುದು, ಯಾವುದನ್ನು ಆಚರಿಸುತ್ತೇವೆ ಎಂಬುದನ್ನು ಅವರು ತಮ್ಮ ತಾಯಿಯನ್ನೇ ಕೇಳಲಿ. ಅವರನ್ನು ಹೆತ್ತು, ಹೊತ್ತ ತಾಯಿಯೇ ಸರಿಯಾದ ಉತ್ತರ ಕೊಡುತ್ತಾರೆ ಎಂದರು.

ಹಿಂದೂ ಸಂಸ್ಕೃತಿ, ನಮ್ಮ ಧರ್ಮ ಉಳಿಸುವವರಿಗೆ ತಾಯಿ ಚಾಮುಂಡೇಶ್ವರಿ ಶಕ್ತಿ ಕೊಡಲಿ. ಮಹರಾಜರು ಈ ನೆಲದ ಸಂಸ್ಕೃತಿ, ಧರ್ಮವನ್ನು ಉಳಿಸಿದರು. ನಮ್ಮ ಸಂಸ್ಕೃತಿ ಉಳಿಸುವವರಿಗೆ ತಾಯಿ ಆಶೀರ್ವಾದವಿರಲೆಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ವೇಳೆ, ಇಡೀ ದೇಶದಲ್ಲೇ ಅತಿ ಹೆಚ್ಚು ಮತಗಳು ಡಿಲೀಟ್ ಆಗಿರುವುದು ಕರ್ನಾಟಕದಲ್ಲಿ. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಬಹಳಷ್ಟು ಮತ ಡಿಲೀಟ್ ಆಗಿವೆ ಎಂದರು.

## ಭಾರತ ಎಂದಿಗೂ ಹಿಂದು ದೇಶವೇ: ಕೆ.ಎಸ್.ಈಶ್ವರಪ್ಪ

**ಮೈಸೂರು:** ಭಾರತ ಸೂರ್ಯ, ಚಂದ್ರ ಇರುವವರೆಗೂ ಹಿಂದೂ ರಾಷ್ಟ್ರವೇ ಆಗಿಲಿದೆ. ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಏನೋ ಹೇಳಿದಾಕ್ಷಣಕ್ಕೆ ಹಿಂದೂ ರಾಷ್ಟ್ರ ಎಂಬುದನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಕಿಡಿಕಾರಿದರು.



ಚಾಮುಂಡಿಬೆಟ್ಟದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಗತ್ತಿನಲ್ಲಿ ಮುಸ್ಲಿಂ ರಾಷ್ಟ್ರಗಳಿವೆ. ಕ್ರೈಸ್ತರ ದೇಶಗಳೂ ಇವೆ. ಹಿಂದೂಗಳಿಗೆ ಇರುವ ಏಕೈಕ ರಾಷ್ಟ್ರವೆಂದರೆ ಅದು ಭಾರತ ಮಾತ್ರ. ಕೋಟ್ಯಂತರ ಜನರು ಹಿಂದೂ ರಾಷ್ಟ್ರಕ್ಕಾಗಿ ಕಾಯುತ್ತಿದ್ದಾರೆ ಎಂದು ಹೇಳಿದರು.

ನಾನು ಬಿಜೆಪಿಗೆ ಮರಳುವ ಬಗ್ಗೆ ಪಕ್ಷದ ಹಿರಿಯರು, ಅಧಿಕಾರದಲ್ಲಿ ಇರುವವರು ಮಾತುಕತೆ ನಡೆಸುತ್ತಿದ್ದಾರೆ. ನಾನು ಹಲವು ಬೇಡಿಕೆಗಳನ್ನು ಇಟ್ಟಿದ್ದೇನೆ. ಷರತ್ತುಗಳೇನಲ್ಲ. ನಾನು ಬೇರೆಲ್ಲೂ ಹೋಗುವುದಿಲ್ಲ. ರಾಜ್ಯದಾದ್ಯಂತ ಪಕ್ಷ ಕಟ್ಟಿರುವವರಿಗೆ ಈಗಿನ ಸ್ಥಿತಿ ನೋಡಿ ಬೇಸರವಾಗಿದೆ. ಪಕ್ಷದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

## ಬಸ್‌ನಲ್ಲಿ ಹೃದಯಾಘಾತ: ಕ್ಷೇತ್ರ ಬಿಇಒ ಸಾವು

**ಮಡಿಕೇರಿ:** ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಕರ್ತವ್ಯಕ್ಕೆ ತೆರಳುತ್ತಿದ್ದ ವೇಳೆ ಬಸ್‌ನಲ್ಲೇ ಹೃದಯಾಘಾತದಿಂದ ಮೃತಪಟ್ಟಿರುವ ದುರ್ಘಟನೆ ನಡೆದಿದೆ.

ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಜೆ.ಆನಂದ್ (55) ಅವರು ಶುಕ್ರವಾರ ಮುಂಜಾನೆ ಮೈಸೂರಿನಿಂದ ವಿರಾಜಪೇಟೆಗೆ ಕರ್ತವ್ಯಕ್ಕೆ ತೆರಳಲು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಇಲವಾಲ ಸಮೀಪ ಬಸ್ ತಲುಪುತ್ತಿದ್ದಂತೆ ಅವರಿಗೆ ತೀವ್ರ ಎದೆ ನೋವು ಕಾಣಿಸಿಕೊಂಡಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ಪ್ರಯತ್ನಿಸಲಾಯಿತು. ಆದರೆ, ಆಸ್ಪತ್ರೆಗೆ ತಲುಪುವ ಮುನ್ನವೇ ಬಸ್‌ನಲ್ಲೇ



ಪುಟ 2ಕ್ಕೆ

## ಸಚಿವ ಜಾರ್ಜ್ ಬೆಂಗಾವಲು ವಾಹನಕ್ಕೆ ಅಪಘಾತ

**ಚಿಕ್ಕಮಗಳೂರು:** ಅಜ್ಜಂಪುರದ ಅಮೃತ ಮಹಲ್ ತಳಿ ಸಂವರ್ಧನ ಕೇಂದ್ರಕ್ಕೆ ತೆರಳುವಾಗ ಸಚಿವ ಕೆ.ಜೆ.ಜಾರ್ಜ್ ಅವರ ಬೆಂಗಾಲು ವಾಹನ ಅಪಘಾತಕ್ಕೀಡಾಗಿರುವ ಘಟನೆ ನಡೆದಿದೆ.




ಸಚಿವ ಜಾರ್ಜ್ ಅವರು ಬರ ವೀಕ್ಷಣೆಗಾಗಿ ಚಿಕ್ಕಮಗಳೂರು ಜಿಲ್ಲೆಯ ಬಯಲುಸೀಮೆ ಪ್ರವಾಸಕ್ಕೆ ತೆರಳುತ್ತಿದ್ದರು. ಪಟ್ಟಣದ ಅಮೃತ್ ಮಹಲ್ ಸಂವರ್ಧನ ತಳಿ ಕೇಂದ್ರದತ್ತ ವಾಹನ ತೆರಳುತ್ತಿದ್ದಾಗ, ಬೆಂಗಾವಲು ವಾಹನ ಕೇಂದ್ರದ ಗೇಟ್‌ಗೆ ಡಿಕ್ಕಿಯೊಡೆದಿದೆ.

ಪುಟ 2ಕ್ಕೆ

## ಅರ್ಹರಿಗೆ ಸಿಗದ ಸಚಿವ ಸ್ಥಾನ, ಇಡೀ ದೇಶದ ಸಮಸ್ಯೆ: ಸಿಂಗ್

**ರಾಯಚೂರು:** ಅರ್ಹರಿಗೆ ಸಚಿವ ಸ್ಥಾನ ಸಿಗದಿರುವುದು ನಮ್ಮ ರಾಜ್ಯ ಅಥವಾ ಕಾಂಗ್ರೆಸ್ ಪಕ್ಷದ ಸಮಸ್ಯೆಯಲ್ಲ. ಇಡೀ ದೇಶದಲ್ಲೇ ಈ ಸಮಸ್ಯೆ ಇದೆ. ಬಹಳಷ್ಟು ಜನ ಹಿರಿಯರು ಹಾಗೂ ಅರ್ಹರು ಇದ್ದಾರೆ. ಈ ಬಾರಿ ಕೆಲವು ಯುವಕರಿಗೆ ಹಾಗೂ ಕೆಲವು ಹಿರಿಯರಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ನೂತನ ಸಚಿವ ಅಜಯ್ ಸಿಂಗ್ ಹೇಳಿದರು.



ರಾಯಚೂರಿನಲ್ಲಿ ಮಾತನಾಡಿ ಸಚಿವ ಸ್ಥಾನ ಸಿಗದೇ ಹಲವು ಶಾಸಕರು ಅಸಮಾಧಾನಗೊಂಡಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದರು. ನಮ್ಮ ತಂದೆ ಸಿಎಂ ಆಗಿದ್ದಾಗಲೂ ಬಹಳಷ್ಟು ಅರ್ಹರಿಗೆ ಸಚಿವ ಸ್ಥಾನ ಸಿಕ್ಕಿರಲಿಲ್ಲ. ಸಿಎಂ ಡಿಕೆಶಿ ಅವರೂ ಕೂಡ 2004ರಿಂದ 2014ರವರೆಗೆ ಎರಡು ಬಾರಿ ಸಚಿವರಾಗಿರಲಿಲ್ಲ ಎಂದು ಅಜಯ್ ಸಿಂಗ್ ಹೇಳಿದರು.

ಸಚಿವ ಸ್ಥಾನ ವಂಚಿತ ಶಾಸಕರ ಅಸಮಾಧಾನವೂ ನಿಧಾನವಾಗಿ ಶಮನವಾಗುತ್ತಿದೆ. ಈಗಾಗಲೇ ರಾಜೀನಾಮೆ ನೀಡಿದ್ದ ಶಾಸಕರು ವಾಪಸ್ ಪಡೆದಿದ್ದಾರೆ. ಇದು ಕೇವಲ ನಮ್ಮ ಪಕ್ಷದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಸಮಸ್ಯೆಯಲ್ಲ. ಇಡೀ ದೇಶದ ರಾಜಕೀಯದಲ್ಲಿ ಇಂತಹ ಬೆಳವಣಿಗೆಗಳು ನಡೆಯುತ್ತವೆ ಎಂದು ಅಜಯ್ ಸಿಂಗ್ ಹೇಳಿದರು.

ಪುಟ 2ಕ್ಕೆ

## ಸಚಿವ ಸ್ಥಾನ ಬಿಟ್ಟು ಬೇರೆ ಮಾತಿಲ್ಲ

### ಕಾಂಗ್ರೆಸ್ ನಾಯಕರಿಗೆ ಶಾಸಕ ಕೃಷ್ಣಪ್ಪ ಖಡಕ್ ಉತ್ತರ

**ಬೆಂಗಳೂರು:** ನನಗೆ ಸಚಿವ ಸ್ಥಾನ ನೀಡಲೇ ಬೇಕು. ಅದನ್ನು ಬಿಟ್ಟು ಯಾರೊಂದಿಗೂ ಬೇರೆ ಮಾತುಕತೆಗೆ ಅವಕಾಶವಿಲ್ಲ ಎಂದು ಶಾಸಕ ಎಂ.ಕೃಷ್ಣಪ್ಪ ಕಾಂಗ್ರೆಸ್ ನಾಯಕರಿಗೆ ಖಡಕ್ ಆಗಿ ಉತ್ತರಿಸಿದ್ದಾರೆ.

ಸಚಿವ ಸ್ಥಾನ ಕೈತಪ್ಪಿದ್ದಕ್ಕೆ ಬೇಸರಗೊಂಡಿರುವ ಎಂ.ಕೃಷ್ಣಪ್ಪ ತಮ್ಮ ಬಿಗಿ ಪಟ್ಟು ಮುಂದುವರಿಸಿದ್ದಾರೆ. ಸಚಿವ ಸ್ಥಾನ ಕೈತಪ್ಪಿದ ವಿಚಾರದಲ್ಲಿ ಬೇರೆ ಯಾವುದೇ ಚರ್ಚೆಗೆ ಆಸ್ಪದವಿಲ್ಲ ಎಂದು ಹೇಳಿದ್ದಾರೆ.

ಸಚಿವ ಸ್ಥಾನ ಕೈತಪ್ಪಿದ್ದರಿಂದ ತೀವ್ರ ಅಸಮಾಧಾನಗೊಂಡಿರುವ ವಿಜಯನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಂ.ಕೃಷ್ಣಪ್ಪ ಹಾಗೂ ಅವರ ಪುತ್ರ ಪ್ರಿಯಕೃಷ್ಣ ಅವರ ಮನವೊಲಿಸಲು ಶುಕ್ರವಾರ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಕೃಷ್ಣಪ್ಪ

ಪುಟ 2ಕ್ಕೆ



## ಕೊಡಗಿನಲ್ಲಿ ಮತ್ತೆ ಮಳೆ ಅಬ್ಬರ



**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ದಿನಗಳಿಂದ ಕೊಂಚ ಮಟ್ಟಿಗೆ ತಗ್ಗಿದ್ದ ಮಳೆ ಮತ್ತೆ ತನ್ನ ಅಬ್ಬರ ಆರಂಭಿಸಿದೆ. ಗುರುವಾರ ರಾತ್ರಿಯಿಂದಲೇ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಶುಕ್ರವಾರವೂ ಮಳೆ ಅಬ್ಬರ ಮುಂದುವರಿದಿದೆ.

ಮಡಿಕೇರಿ, ಸೋಮವಾರಪೇಟೆ, ಗಾಳಿಬೀಡು, ಮದೆನಾಡು ಸೇರಿದಂತೆ ಜಿಲ್ಲೆಯ ಹಲವು ಭಾಗಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೂ ಬಿಡುವಿಲ್ಲದೆ ಮಳೆ ಸುರಿಯುತ್ತಿದೆ. ಮಳೆಯ ತೀವ್ರತೆ ಗಣನೀಯವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ನದಿ ಪಾತ್ರದ ನಿವಾಸಿಗಳು ಎಚ್ಚರಿಕೆಯಿಂದ ಇರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಜಿಲ್ಲೆಯ ಪ್ರಮುಖ ಜಲಾಶಯವಾದ ಹಾರಂಗಿಗೆ ಒಳಹರಿವು ಹೆಚ್ಚಾಗಿದೆ. ಹಾರಂಗಿ ಜಲಾಶಯ ಭರ್ತಿಯಾಗಿದೆ.

ಪುಟ 2ಕ್ಕೆ

## ಸಚಿವ ಸ್ಥಾನ ಸಿಗದಿದ್ದರೆ 2-3 ದಿನ ಮುನಿಸು

**ಚಾಮರಾಜನಗರ:** ಸಚಿವ ಸ್ಥಾನ ಸಿಗದಿದ್ದರೆ ಮುನಿಸು ಎಲ್ಲಾ ಕಾಮನ್. ನನಗೂ ಸಚಿವ ಸ್ಥಾನ ಕೊಡದೇ ಇದ್ದಿದ್ದರೆ ಎರಡು-ಮೂರು ದಿನ ಮುನಿಸಿಕೊಳ್ಳುತ್ತಿದ್ದೆ ಎಂದು ಸಚಿವ ಪುಟ್ಟರಂಗಶೆಟ್ಟಿ ಹೇಳಿದರು.

ಸಚಿವ ಸ್ಥಾನ ಸಿಗದಿರುವುದಕ್ಕೆ ಅಸಮಾಧಾನಗೊಂಡಿರುವ ಶಾಸಕರ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಮುನಿಸು ಎಲ್ಲಾ ಕಾಮನ್. ರಾಜಕಾರಣದಲ್ಲಿ ಒಳ್ಳೆದು, ಕೆಟ್ಟದ್ದು ಇರುತ್ತದೆ. ಮುನಿಸಿಕೊಂಡವರು ಕೂಡ ಸಮಾಧಾನ ಆಗುತ್ತಾರೆ ಎಂದು ತಿಳಿಸಿದರು.

ವನ್ಯಜೀವಿ ಮಾನವ ಸಂಘರ್ಷ ಹೆಚ್ಚಳ ಕುರಿತು ಮಾತನಾಡಿ, ಪ್ರಾಣಿಗಳಿಗೆ ಕಾಡಿನಲ್ಲಿ ಮೇವು, ನೀರು ಸಿಗ್ತಿಲ್ಲ. ಹುಲಿ, ಚಿರತೆಗಳಿಗೆ ಮಾಂಸಾಹಾರವೇ ಬೇಕು. ಇದೀಗ ಕಾಡುಹಂದಿ, ಜಿಂಕೆ ಮೇವು ಅರಸಿ ನಾಡಿಗೆ ಬಂದಿವೆ. ಈ ಪ್ರಾಣಿಗಳನ್ನು ಹುಡುಕಿಕೊಂಡು ಚಿರತೆ, ಹುಲಿ ಬಂದಿವೆ.

ಪುಟ 2ಕ್ಕೆ

## ಪರಿಷತ್ ಸದಸ್ಯರಾಗಿ ಗಾಯತ್ರಿ ಪ್ರಮಾಣ ವಚನ

**ಬೆಂಗಳೂರು:** ವಿಧಾನ ಪರಿಷತ್ ಸದಸ್ಯರಾಗಿ ಗಾಯತ್ರಿ ಶಾಂತೇಗೌಡ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಕೊಠಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಗವಂತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಿಎಂ ಡಿ.ಕೆ ಶಿವಕುಮಾರ್ ಉಪಸ್ಥಿತರಿದ್ದರು.

ಗಾಯತ್ರಿ ಶಾಂತೇಗೌಡ ಅವರು ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ನಿರೀಕ್ಷಿಸಲಾಗಿದ್ದರೂ, ಕೊನೆಯ ಕ್ಷಣದಲ್ಲಿ ಅವರ ಹೆಸರನ್ನು ಕೈಬಿಡಲಾಗಿತ್ತು. ಎಂಎಲ್‌ಸಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ, ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ಸ್ಪಷ್ಟನೆ ಸಿಗುವ ಸಾಧ್ಯತೆಯಿದೆ.

# ಮಹದೇವಪ್ಪಗೆ ಸಚಿವ ಸ್ಥಾನ ನೀಡದಿರುವುದು ಕೈಗೆ ನಷ್ಟ

**ಡಾ.ವಿ.ಎನ್.ಮಹದೇವಯ್ಯ**



ಚಾಮರಾಜನಗರ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸೈದ್ಧಾಂತಿಕ ಸಾಮರ್ಥ್ಯ, ಮಾನವೀಯ ಸಾಮಾಜಿಕ ಬದ್ಧತೆಯುಳ್ಳ ಚಿಂತಕ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡದಿರುವುದು ಕಾಂಗ್ರೆಸ್ ಪಕ್ಷಕ್ಕೆ ಭಾರಿ ನಷ್ಟವನ್ನು ಉಂಟುಮಾಡಲಿದೆ ಎಂದು ಅಹಿಂದ: ದೇಸಿ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಡಾ.ಎಚ್.ಸಿ.ಮಹದೇವಪ್ಪ ಅವರಂತಹ ಸೈದ್ಧಾಂತಿಕ ಸಾಮರ್ಥದ ವ್ಯಕ್ತಿಯನ್ನು ಕೈಬಿಟ್ಟಿರುವುದು ನೋವಿನ ಸಂಗತಿ. ತಮ್ಮ ಸೈದ್ಧಾಂತಿಕ ನಿಲುವಿನಿಂದ ಮೈಸೂರು ಮತ್ತು ಕರ್ನಾಟಕದ ಜನತೆಯನ್ನು ಅವರು ಸದಾ ಎಚ್ಚರದಲ್ಲಿ ಇಟ್ಟಿದ್ದರು. ಎಷ್ಟು ಎತ್ತರಕ್ಕೆ ಬೆಳೆದಿದ್ದರು ಎಂದರೆ ಅವರ ವಿಚಾರಗಳನ್ನು ಕೇಳಬೇಕು ಎಂದು ಸಾಮಾನ್ಯರಿಗೂ, ಚಿಂತಕರಿಗೂ ಅನಿಸುತ್ತಿತ್ತು. ಕಾಂಗ್ರೆಸ್ ಪಕ್ಷವನ್ನು ಅವರು ಸದೃಡವಾಗಿ ಇಟ್ಟಿದ್ದರು. ಅವರನ್ನು ಸಚಿವ ಸಂಪುಟದಿಂದ ಕಡೆಗಣಿಸಿರುವುದು ಸಮುದಾಯ, ಅಭಿಮಾನಿಗಳಿಗೆ ಅಘಾತ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ಎಚ್.ಸಿ.ಮಹದೇವಪ್ಪ ಅವರು ಸಿದ್ದರಾಮಯ್ಯ ಅವರ ನಂತರದ ನೈಜ ಉತ್ತರಾಧಿಕಾರಿಯಾಗಲು ಅರ್ಹರು. ಆದರೆ, ಇಂದಿನ ರಾಜಕೀಯ ಬೆಳವಣಿ ಗೆಗಳಲ್ಲಿ ಅಹಿಂದ ವರ್ಗದ ನಾಯಕರನ್ನು ಕಡೆಗಣಿಸಲಾಗುತ್ತಿದೆ ಇದು ಕಾಂಗ್ರೆಸ್ಗೆ ಮುಂದಿನ ದಿನಗಳಲ್ಲಿ ನುಂಗಲಾರದ ತುತ್ತಾಗುತ್ತದೆ. ದೂರಿದರು.

ಕಾಂಗ್ರೆಸ್ ಹೈಕಮಾಂಡ್‌ನ ದಲಿತ ವಿರೋಧಿ ತಂತ್ರಗಾರಿಕೆಯಿಂದ ಮಹದೇವಪ್ಪ ಅವರಂತಹ ಪ್ರಬಲ ನಾಯಕರಿಗೆ ಅನ್ಯಾಯವಾಗಿದೆ. ಇದು ಪಕ್ಷದ ಮೇಲೆ ದುಷ್ಪರಿಣಾಮ ಬೀರಲಿದೆ. ಇಂದಿನ ರಾಜಕಾರಣದಲ್ಲಿ ಮೇಲ್ವರ್ಗದ ಲಾಬಿಗಳು ಯಶಸ್ವಿಯಾಗುತ್ತಿದ್ದು, ಅಹಿಂದ ಮತ್ತು ದಲಿತ ರಾಜಕಾರಣವು ಅವಕಾಶವಾದಿ ರಾಜಕಾರಣದ ಬಲಿಪಶುಗಳಾಗುತ್ತಿವೆ ಎಂದರು.ಎಚ್.ಸಿ.ಮಹದೇವಪ್ಪ ಅವರು ದಲಿತ ಚಳವಳಿ ಮತ್ತು ಸಂಘಟನೆಗಳ ಪ್ರಬಲ ಧ್ವನಿಯಾಗಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡದಿರುವುದು ದಲಿತ ಸಮುದಾಯಗಳ ಬೆಂಬಲವನ್ನು ಕಾಂಗ್ರೆಸ್ ಕಳೆದುಕೊಳ್ಳಲು ಕಾರಣವಾಗಬಹುದು. ಮಹದೇವಪ್ಪ ಅವರ ಬೆಂಬಲಿಗರು ಮತ್ತು ಮುಖಂಡರು ಈ ಅನ್ಯಾಯವನ್ನು ಉಗ್ರವಾಗಿ ಖಂಡಿಸುತ್ತಿದ್ದು, ತಕ್ಷಣವೇ ಪಕ್ಷವು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಅಹಿಂದ -ದೇಶಿ ಸಮುದಾಯಗಳ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಮಹಮ್ಮದ್ ಮತೀನ್, ಪ್ರಧಾನ ಕಾರ್ಯದರ್ಶಿ ಎಲ್.ಶಂಭುಲಿಂಗಸ್ವಾಮಿ, ಉಪಾಧ್ಯಕ್ಷರಾದ ರಾಚಪ್ಪ, ಎಂ.ರಾಮು, ಆಸಿಫ್ ಉಲ್ಲಾ, ಸೈಯದ್ ಅಜರ್ ಹಾಜರಿದ್ದರು.

# ಕೃಷಿ ಯಂತ್ರೋಪಕರಣ ಸಹಾಯಧನ ಯೋಜನೆಗೆ ಅರ್ಜಿ ಆಹ್ವಾನ

ಗುಂಡ್ಲುಪೇಟೆ:- 2026-27ನೇ ಸಾಲಿನ ಕೃಷಿ ಇಲಾಖೆ ವಿವಿಧ ಯೋಜನೆಗಳಡಿ ರೈತರಿಗೆ ಸಹಾಯಧನದಲ್ಲಿ ಕೃಷಿ ಯಂತ್ರೋಪಕರಣಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ತಾಲೂಕಿಗೆ ಅನುದಾನ ಹಂಚಿಕೆಯಾಗಿದ್ದು, ಅರ್ಹ ರೈತರು ಹಾಗೂ ರೈತ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಯೋಜನೆಯಡಿ ವಿವಿಧ ರೀತಿಯ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ವಿತರಿಸಲಾಗುವುದು. ಯಂತ್ರೋಪಕರಣಗಳ ಲಭ್ಯತೆ, ಸರಬರಾಜು ಸಂಸ್ಥೆಗಳ ವಿವರ, ಯಂತ್ರೋಪಕರಣಗಳ ಪೂರ್ಣ ದರ, ಸರ್ಕಾರದಿಂದ ದೊರೆಯುವ ಸಹಾಯಧನದ ಪ್ರಮಾಣ ಹಾಗೂ ರೈತರಿಂದ ಭರಿಸಬೇಕಾದ ಮೊತ್ತ ಸೇರಿದಂತೆ ಅಗತ್ಯ ಮಾಹಿತಿಯನ್ನು ಗುಂಡ್ಲುಪೇಟೆ ಕೃಷಿ ಇಲಾಖೆಯ ಕಚೇರಿಯಲ್ಲಿ ಪಡೆದುಕೊಳ್ಳಬಹುದು. ಆಸಕ್ತ ರೈತರು ಅಗತ್ಯ ದಾಖಲೆಗಳೊಂದಿಗೆ ಶೀಘ್ರವೇ ಅರ್ಜಿ ಸಲ್ಲಿಸಿ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುವಂತೆ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 82779 30774 ಹಾಗೂ 95381 26130 ಸಂಖ್ಯೆಗಳನ್ನು ಸಂಪರ್ಕಿಸಬಹುದು.

# ಅಸ್ಸಾಂ ಸಂತ್ರಸ್ತರಿಗೆ ನೆರವಿನ ಸಂಗ್ರಹ

ಗುಂಡ್ಲುಪೇಟೆ:- ಅಸ್ಸಾಂ ರಾಜ್ಯದಲ್ಲಿ ಉಂಟಾಗಿರುವ ಭೀಕರ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರ ನೆರವಿಗಾಗಿ ಗುಂಡ್ಲುಪೇಟೆಯ ಬಿಲಾಲ್ ಮಸೀದಿಯಲ್ಲಿ ಎಸ್‌ಡಿಪಿಐ (ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ಹಾಗೂ ಜಮಿಯತ್ ಉಲಮಾಯ ಹಿಂದ್ ವತಿಯಿಂದ ಶುಕ್ರವಾರ ಪ್ರವಾಹ ಪರಿಹಾರ ನಿಧಿ ಸಂಗ್ರಹಿಸಲಾಯಿತು.



ಅಸ್ಸಾಂನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ನದಿಗಳು ಉಕ್ಕಿ ಹರಿದು ನೂರಾರು ಗ್ರಾಮಗಳು ಜಲಾವೃತವಾಗಿದ್ದು, ಸಾವಿರಾರು ಮನೆಗಳು ನೀರಿನಲ್ಲಿ ಮುಳುಗಿವೆ. ಅನೇಕ ಕುಟುಂಬಗಳು ಮನೆ-ಮಠ ಕಳೆದುಕೊಂಡು ಸಂಕಷ್ಟದ ಬದುಕು ನಡೆಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಮಾನವೀಯತೆ ತೋರಿಸಿ ಉದಾರವಾಗಿ ನೆರವು ನೀಡುವಂತೆ ಸಂಘಟನೆಯ ಮುಖಂಡರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಸ್ಸಾಂ ಪ್ರವಾಹ ಸಂತ್ರಸ್ತರ ಕ್ಷೇಮಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಅಲ್ಲದೆ, ಸಂಕಷ್ಟದಲ್ಲಿರುವ ಜನರ ನೆರವಿಗೆ ಎಲ್ಲರೂ ಕೈಜೋಡಿಸುವಂತೆ ಕರೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಜಿಲ್ಲಾ ಸಮಿತಿ ಸದಸ್ಯ ಹಾಗೂ ಗುಂಡ್ಲುಪೇಟೆ ಜಾಮಿಯಾ ಮಸೀದಿ ಕಾರ್ಯಕಾರಿ ಸಮಿತಿ ಸದಸ್ಯ ಇಮ್ರಾನ್ ಖಾನ್, ಮೌಲಾನಾ ಸಿರಾಜ್, ತೌಸಿಫ್ ಸೇರಿದಂತೆ ಮುಸ್ಲಿಂ ಮುಖಂಡರು, ಯುವಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಪರಿಹಾರ ನಿಧಿ ಸಂಗ್ರಹ ಕಾರ್ಯದಲ್ಲಿ ಭಾಗವಹಿಸಿದರು.

# ಸಂತ್ರಸ್ತರ ಮನೆಗೆ ಅಧಿಕಾರಿಗಳ ಭೇಟಿ

**ವರ್ತಮಾನ ವರದಿ ಫಲಶೃತಿ**

**▸▸ ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಜವಾಬ್ದಾರಿ ಮರೆತಿದ್ದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ವರ್ತಮಾನ ದಿನಪತ್ರಿಕೆ ವರದಿ ಪರಿಣಾಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನೋಟಿಸ್ ನೀಡಿದ್ದ ಮೇರೆಗೆ ಸಂತ್ರಸ್ತ ಮಕ್ಕಳ ಮನೆಗೆ ಭೇಟಿ ನೀಡಿ ಸಮಾಲೋಚನೆ ನಡೆಸಿದ್ದಾರೆ.

ತಾಲೂಕಿನ ಎರಡು ಗ್ರಾಮಗಳಲ್ಲಿ ಇತ್ತೀಚೆಗೆ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತು. ಘಟನೆಗಳ ಮಾಹಿತಿ ತಿಳಿದಿದ್ದರೂ ಘಟಕದ ಯಾರೊಬ್ಬರೂ ಭೇಟಿ ನೀಡದೆ, ಮಕ್ಕಳು ಮತ್ತು ಕುಟುಂಬಸ್ಥರಿಗೆ ನೆರವು, ಸುರಕ್ಷತೆ, ಸಮಾಲೋಚನೆ ನಡೆಸಿರಲಿಲ್ಲ. ಈ ಕುರಿತು ಪತ್ರಿಕೆ ಜವಾಬ್ದಾರಿ ಮರೆತ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಎಂಬ ಶೀರ್ಷಿಕೆಯಲ್ಲಿ ಸುದ್ದಿ ಪ್ರಕಟಿಸಿತ್ತು.

ವರದಿ ಗಮನಿಸಿದ ಡಿಡಿ ನಾಗರಾಜು, ಈ ಕುರಿತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವಾನ ನೀಡದಿರುವುದು ನಿಮ್ಮ ನಿರ್ಲಕ್ಷ್ಯತನವನ್ನು ತೋರುತ್ತದೆ. ಸಂತ್ರಸ್ತೆಯರ ಮನೆಗೆ ಖುದ್ದು ಭೇಟಿ ನೀಡಿ ಛಾಯಾಚಿತ್ರದೊಂದಿಗೆ ವರದಿ ನೀಡಬೇಕು.




ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ನೋಟಿಸ್ ನೀಡಿದ್ದರು. ಇದೀಗ, ಗುರುವಾರ ಸಂಜೆ ಗ್ರಾಮಗಳಿಗೆ ಭೇಟಿ ನೀಡಿರುವ ಅಧಿಕಾರಿಗಳು ಸಂತ್ರಸ್ತರ ಕುಟುಂಬಸ್ಥರ ಜೊತೆ ಸಮಾಲೋಚನೆ ನಡೆಸಿದ್ದಾರೆ.

## ಹರವೆಯಲ್ಲಿ ಗೋಶಾಲೆ ತೆರೆಯುವಂತೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ

# ಬರ ನಿರ್ವಹಣೆಯಲ್ಲಿ ಸರ್ಕಾರ ವಿಫಲ

## ಜಿಲ್ಲೆಯಲ್ಲಿ ಸಚಿವ ಸಿ.ಪುಟ್ಟರಂಗಶೆಟ್ಟಿ, ಶಾಸಕರ ಬರ ಅಧ್ಯಯನ ನಾಟಕ: ಮೂಡ್ನಾಕೂಡು ಪ್ರಕಾಶ್

ಚಾಮರಾಜನಗರ: ತಾಲೂಕಿನ ಹರವೆ ನಾಡಕಚೇರಿ ಮುಂಭಾಗದಲ್ಲಿ ಗೋಶಾಲೆ, ಮೇವಿನ ಕೇಂದ್ರ ತೆರೆಯುವುದು, ತಡೆಹಿಡಿಯಲಾಗಿರುವ ವಿವಿಧ ಪಿಂಚಣಿಗಳನ್ನು ತಕ್ಷಣ ವಿತರಿಸುವುದು ಹಾಗೂ ಕೆರೆಗಳಿಗೆ ನೀರು ಹರಿಸುವುದಕ್ಕೆ ಒತ್ತಾಯಿಸಿ ಹರವೆ ಬಿಜೆಪಿ ಮಹಾಶಕ್ತಿ ಕೇಂದ್ರದ ವತಿಯಿಂದ ಬೃಹತ್ ಧರಣಿ ಸಾತ್ಯಾಗ್ರಹ ನಡೆಸಲಾಯಿತು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಾಲೂಕು ತಹಸೀಲ್ದಾರ್ ಗಿರಿಜಾ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಜಿಲ್ಲೆಯಲ್ಲಿ ಉಂಟಾಗಿರುವ ತೀವ್ರ ಬರಗಾಲದ ಬಗ್ಗೆ ಸಚಿವ ಸಿ. ಪುಟ್ಟರಂಗಶೆಟ್ಟಿ ಹಾಗೂ ಸ್ಥಳೀಯ ಶಾಸಕರಿಗೆ ಸಂಪೂರ್ಣ ಮಾಹಿತಿಯಿದೆ. ಹೀಗಿದ್ದರೂ ಅವರು ನಡೆಸುತ್ತಿರುವ 'ಬರ ಅಧ್ಯಯನ ಪ್ರವಾಸ' ಕೇವಲ ಒಂದು ನಾಟಕವಾಗಿದೆ. ಸರ್ಕಾರದ ಖಜಾನೆ ಖಾಲಿಯಾಗಿದ್ದು, ಬರ ನಿರ್ವಹಣೆಗೆ ಹಣವಿಲ್ಲದ ಕಾರಣ ಅಧ್ಯಯನದ ನೆಪದಲ್ಲಿ ಕಾಲಹರಣ ಮಾಡುತ್ತಿದ್ದಾರೆ ಎಂದು ಕಟುವಾಗಿ ವಾಗ್ದಾಳಿ ನಡೆಸಿದರು.

ಈ ಪ್ರತಿಭಟನೆಯಲ್ಲಿ ಹರವೆ ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಹದೇವಪ್ರಸಾದ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕಮಲಮ್ಮ, ಎಸ್ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಗಿರೀಶ್, ಪ್ರಮುಖರಾದ ಚಿಕ್ಕನಾಗಪ್ಪ, ಕೃಷ್ಣಶೆಟ್ಟಿ, ನಂಜುಂಡಸ್ವಾಮಿ, ಮಾಜಿ ಉಪಾಧ್ಯಕ್ಷ ಮಹದೇವಸ್ವಾಮಿ, ಶಕ್ತಿಕೇಂದ್ರ ಅಧ್ಯಕ್ಷರಾದ ಕಲ್ಪುರ ವೃಷಬೇಂದ್ರಸ್ವಾಮಿ, ಭುಜಗನಪುರ ಮಹದೇವಸ್ವಾಮಿ, ಸೊಸೈಟಿ ಅಧ್ಯಕ್ಷ ಮಾದಪ್ಪ, ಡೈರಿ ಮಾಜಿ ಅಧ್ಯಕ್ಷ ಎಂ.ಸಿ. ಮಲ್ಲಣ್ಣ, ನಾಗಭೂಷಣ್, ಹರವೆ ಮಧು, ನಟರಾಜು, ಹಳೆಪುರ ಸುಂದರಪ್ಪ ಹಾಗೂ ಗ್ರಾಮ ಪಂಚಾಯತಿ ಸದಸ್ಯರಾದ ಕುಮಚಳ್ಳಿ ಸ್ವಾಮಿ, ಶಿವಣ್ಣ ನಾಯಕ್,



### ರೈತರ ಆರ್ಥಿಕ ಸಂಕಷ್ಟ ಮತ್ತು ಮೇವಿನ ಅಭಾವ

ರಾಜ್ಯದಲ್ಲೇ ತೀವ್ರ ಬರ ಎದುರಿಸುತ್ತಿರುವ ಹೋಬಳಿಗಳಲ್ಲಿ ಹರವೆ ಕೂಡ ಒಂದಾಗಿದೆ. ಈ ಭಾಗದ ರೈತರು ಸಂಪೂರ್ಣವಾಗಿ ಕೊಳವೆಬಾವಿಗಳನ್ನು ನೆಚ್ಚಿಕೊಂಡು ಕೃಷಿ ಹಾಗೂ ಹೈನುಗಾರಿಕೆ ಮಾಡುತ್ತಿದ್ದಾರೆ. ಆದರೆ ಈ ಬಾರಿ ಪೂರ್ವ ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಬಿತ್ತಿದ ಬೆಳೆಗಳು ನೂರಕ್ಕೆ ನೂರರಷ್ಟು ನಾಶವಾಗಿವೆ. ವಾಣಿಜ್ಯ ಹಾಗೂ ಮೇವಿನ ಬೆಳೆಗಳು ಸಂಪೂರ್ಣ ಒಣಗಿಹೋಗಿದ್ದು, ಜಾನುವಾರುಗಳಿಗೆ ಮೇವಿಲ್ಲದೆ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಂದ ಟನ್ ಒಂದಕ್ಕೆ 5,000 ದಿಂದ 6,000 ರೂಪಾಯಿ ನೀಡಿ, ಜೊತೆಗೆ ದುಬಾರಿ ವಾಹನ ಬಾಡಿಗೆ ತೆತ್ತು ಮುಸುಕಿನ ಜೋಳ ಹಾಗೂ ಭತ್ತದ ಹುಲ್ಲನ್ನು ತರಿಸಿಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಇಂತಹ ಕಷ್ಟದ ಸಮಯದಲ್ಲಿ ಸರ್ಕಾರ ಮತ್ತು ಜಿಲ್ಲಾಡಳಿತ ರೈತರ ನೆರವಿಗೆ ಧಾವಿಸಲು ವಿಫಲವಾಗಿದೆ. ಹೀಗಾಗಿ ತಕ್ಷಣವೇ ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದೊಂದು ಮೇವಿನ ಕೇಂದ್ರ ಹಾಗೂ ಗೋಶಾಲೆಗಳನ್ನು ತೆರೆಯಬೇಕು ಎಂದು ಆಗ್ರಹಿಸಿದರು.

ಹೆಗಡೆ ಮಹದೇವಪ್ಪ, ಎಂ.ಸಿ. ಪ್ರಕಾಶ್, ಕುಮಾರ್ ಕೆಂಡ್, ಪರಶಿವಪ್ಪ, ಲಿಂಗಣ್ಣ, ಎಸ್. ಶಿವಕುಮಾರ್, ಮೂಡ್ನಾಕೂಡು ಮಂಜು, ಮಂಜು ಸೇರಿದಂತೆ ಹಲವರು ಭಾಗವಹಿಸಿದ್ದರು.

### ಸರ್ಕಾರದ ವಿರುದ್ಧ ಬಿಜೆಪಿ ನಾಯಕರ ಕಿಡಿನುಡಿ

ರಾಜ್ಯ ಕಾರ್ಯಕಾರಿಣಿ ಸದಸ್ಯ ಕೆರೆಹಳ್ಳಿ ಮಹದೇವಸ್ವಾಮಿ ಮಾತನಾಡಿ, ಈ ಕಾಂಗ್ರೆಸ್ ಸರ್ಕಾರಕ್ಕೆ ರೈತರು ಹಾಗೂ ಬಡವರ ಬಗ್ಗೆ ಯಾವುದೇ ಕಾಳಜಿ ಇಲ್ಲ. ರೈತಪರ ಯೋಜನೆ ರೂಪಿಸುವುದನ್ನು ಬಿಟ್ಟು ರೈತರ ಭೂಮಿ ಕಸಿದುಕೊಳ್ಳುವ ಕೆಲಸ ಮಾಡುತ್ತಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿ ಕೆರೆಗಳಿಗೆ ನಿರಂತರವಾಗಿ ನೀರು ಹರಿಯುತ್ತಿತ್ತು, ಆದರೆ ಈಗ ನೀರು ಹರಿಸಲು ಸರ್ಕಾರ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಅಂತರ್ಜಲ ಕುಸಿತ, ಪಿಂಚಣಿ ಕಡಿತಕ್ಕೆ ಆಕ್ರೋಶ

ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದ ಪರಿಣಾಮ ನೂರಾರು ಕೊಳವೆಬಾವಿಗಳು ಬತ್ತಿ ಹೋಗಿದ್ದು, ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿದ ರೈತರು ಕಂಗಾಲಾಗಿದ್ದಾರೆ. ಸಮಯಕ್ಕೆ ಸರಿಯಾಗಿ ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಸರ್ಕಾರ ಸರಿಯಾಗಿ ನಿರ್ವಹಿಸದಿದ್ದದ್ದೇ ಈ ಅಂತರ್ಜಲ ಕುಸಿತಕ್ಕೆ ಮುಖ್ಯ ಕಾರಣ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಡ ರೈತರು ಮತ್ತು ಸಾರ್ವಜನಿಕರಿಗೆ ಸಣ್ಣಪುಟ್ಟ ಆಸರೆಯಾಗಿದ್ದ ವಿವಿಧ ಪಿಂಚಣಿಗಳನ್ನು 'ಪರಿಷ್ಕರಣೆ'ಯ ನೆಪದಲ್ಲಿ ಸರ್ಕಾರ ನಿಲ್ಲಿಸಿದ್ದು, ಅವರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

# ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ, ವಿಮೆ ಕಲ್ಪಿಸಿ

ಮಂಡ್ಯ: ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರು ನಿರ್ವಹಿಸುತ್ತಿರುವ ಸೇವೆ ಅತ್ಯಂತ ಮಹತ್ವದ್ದಾಗಿದ್ದು, ಅವರ ಆರೋಗ್ಯ, ಸುರಕ್ಷತೆ ಹಾಗೂ ಸಾಮಾಜಿಕ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೊದಲನೇ ತ್ರೈಮಾಸಿಕ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವೃತ್ತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ -2013 ಹಾಗೂ ನಿಯಮಗಳು-2013ರನ್ವಯ ನಡೆದ ಜಿಲ್ಲಾ ಮಟ್ಟದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಗಳ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪೌರಕಾರ್ಮಿಕರಿಗೆ ನಿಯಮಿತವಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಿ, ಅಗತ್ಯ ಆರೋಗ್ಯ ಸೇವೆಗಳನ್ನು ಒದಗಿಸುವುದರ ಜೊತೆಗೆ ಸೂಕ್ತ ವಿಮಾ ಸೌಲಭ್ಯ ಕಲ್ಪಿಸಲು ಕ್ರಮವಹಿಸಬೇಕು. ಕಾರ್ಮಿಕರ ಆರೋಗ್ಯದ ಕುರಿತು ನಿರ್ಲಕ್ಷ್ಯ ವಹಿಸದೆ, ಅವರ ಆರೋಗ್ಯ ಸ್ಥಿತಿಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚಿಸಿದರು. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಗಳಿಗೆ ಸೂಕ್ತ ವಸತಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸಿ ವಿತರಿಸುವುದು



ಹಾಗೂ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು. ಗೃಹ ಭಾಗ್ಯ ಯೋಜನೆಯಡಿ ಮಂಜೂರಾಗಿರುವ ವಸತಿ ಸೌಲಭ್ಯವನ್ನು ಫಲಾನುಭವಿಗಳು ಸ್ವತಃ ಬಳಸಿಕೊಳ್ಳಬೇಕು. ವಸತಿ ಕಟ್ಟಡಗಳನ್ನು ಬಾಡಿಗೆಗೆ ನೀಡುತ್ತಿರುವುದು ಕಂಡುಬಂದಲ್ಲಿ, ಅಂತಹವರ ವಿರುದ್ಧ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ನೇರಪಾವತಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ನಿಗದಿತ ಸಮಯಕ್ಕೆ ವೇತನ ಪಾವತಿಯಾಗುವಂತೆ ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಬೇಕು. ವೇತನ ಪಾವತಿಯಲ್ಲಿ ಯಾವುದೇ ರೀತಿಯ ವಿಳಂಬವಾಗದಂತೆ ನಿರಂತರ ಮೇಲ್ವಿಚಾರಣೆ ನಡೆಸಬೇಕು ಎಂದರು. ತಾಲ್ಲೂಕು ಮಟ್ಟದಲ್ಲಿ ಪೌರಕಾರ್ಮಿಕರ ಕುಂದುಕೊರತೆಗಳನ್ನು ಆಲಿಸಲು ನಿಯಮಿತವಾಗಿ ಸಭೆಗಳನ್ನು ನಡೆಸಬೇಕು. ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿ, ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ಒದಗಿಸುವ ಮೂಲಕ ಅವರಲ್ಲಿ ಆಡಳಿತದ ಮೇಲಿನ ವಿಶ್ವಾಸವನ್ನು ಹೆಚ್ಚಿಸಬೇಕು. ಪೌರಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುವಾಗ ಅಧಿಕಾರಿಗಳು ಮಾನವೀಯತೆ, ಬದ್ಧತೆ ಹಾಗೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದರು. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಇಎಸ್‌ಐ ಹಾಗೂ ಪಿಎಫ್ ಮೊತ್ತವನ್ನು ನಿಯಮಿತವಾಗಿ ಪಾವತಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಕಾರ್ಮಿಕರ ವೇತನ, ಸಾಮಾಜಿಕ ಭದ್ರತೆ ಹಾಗೂ ಕಾನೂನುಬದ್ಧ ಹಕ್ಕುಗಳಿಂದ ಯಾವುದೇ ಕಾರಣಕ್ಕೂ ವಂಚಿತರಾಗದಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು. ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರಾದ ಚಂದ್ರಶೇಖರ್, ಮಂಡ್ಯ ತಹಸೀಲ್ದಾರ್ರಾದ ವಿಶ್ವನಾಥ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀನಿವಾಸ್ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಬರ: ತ.ನಾಡಿಗೆ ನೀರು ಹರಿಸದಿರಿ

ಚಾಮರಾಜನಗರ, ರಾಜ್ಯದಲ್ಲಿ ಬರದ ಛಾಯೆ ಆವರಿಸಿದ್ದು, ಕುಡಿಯುವ ನೀರಿಗೂ ತಾತ್ವರವಾಗಿದೆ. ಈ ಸಂದರ್ಭದಲ್ಲಿ ತಮಿಳುನಾಡಿನಲ್ಲಿರುವ ಫಸಲು ಗಳಿಗೆ ಯಾವುದೇ ಕಾರಣಕ್ಕೂ ಕಾವೇರಿ ನೀರು ಬಿಡ ಬಾರದು ಎಂದು ಗಡಿನಾಡು ಕನ್ನಡ ರಕ್ಷಣಾ ವೇದಿ ಕೆಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.



ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾ ರಿಗಳ ಕಚೇರಿಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಜವರೇಗೌಡರಿಗೆ ವೇದಿಕೆಯ ಪದಾಧಿಕಾರಿಗಳು ಮನವಿ ಸಲ್ಲಿಸಿ ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕ ರಾಜ್ಯದಲ್ಲಿ ತೀವ್ರ ಬರಗಾಲ ಅವರಿಸಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ರಾಜ್ಯದ ರೈತರಿಗೆ ವ್ಯವಸಾಯ ಮಾಡಲು ನೀರಿನ ಅಭಾವ ಹೆಚ್ಚಾಗಿದೆ. ಈ ನಡುವೆ ತಮಿಳುನಾಡಿಗೆ ನೀರು ಹರಿಸುವುದನ್ನು ಗಡಿನಾಡು ಕನ್ನಡ ರಕ್ಷಣಾ ವೇದಿಕೆ ತೀವ್ರವಾಗಿ ಖಂಡಿಸುತ್ತದೆ. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರನ್ನು ಬಿಡಬಾರದೆಂದು ಜಿಲ್ಲಾಧಿಕಾರಿಗಳ ಮುಖಾಂತರ ಕರ್ನಾಟಕದ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ನಾಗೇಶ್, ಉಪಾಧ್ಯಕ್ಷ ಡಿ. ಕಾರ್ತಿಕ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಘ್ನೇಶ್, ಕಾರ್ಯದರ್ಶಿ ಚಾ. ಸಿ. ಸಿದ್ದರಾಜು ಖಜಾಂಚಿ ಗಣೇಶ್ ಯರಿಯೂರು, ನಿರ್ದೇಶಕರಾದ ದುಷ್ಯಂತ್. ತಾಲ್ಲೂಕು ಕಾರ್ಯದರ್ಶಿ ನವೀನ್, ಸಹ ಕಾರ್ಯದರ್ಶಿ ಪ್ರಸನ್ನ ಕೊಮಾರನಪುರ, ಸದಸ್ಯರಾದ ಮಂಜು. ಮಹೇಶ್. ಸಂಜಯ್. ನಿಂಗರಾಜು ಇತರರು ಇದ್ದರು.

# ಆಷಾಢ ಶುಕ್ರವಾರ: ಅನ್ನಸಂತರ್ಪಣೆ

ಗುಂಡ್ಲುಪೇಟೆ, :- ಕಡೆಯ ಆಷಾಢ ಶುಕ್ರವಾರದ ಅಂಗವಾಗಿ ಪಟ್ಟಣದ ಸುರಭಿ ಸಮೀಪದ ನಂದಿನಿ ಕ್ಷೀರ ಕೇಂದ್ರದ ಮುಂಭಾಗದಲ್ಲಿ ಚಾಮುಂಡೇಶ್ವರಿ ಯುವಕರ ಬಳಗದ ವತಿಯಿಂದ ತಾಯಿ ಚಾಮುಂಡೇಶ್ವರಿ ದೇವಿಯ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಭಕ್ತಿಭಾವದಿಂದ ನಡೆಸಲಾಯಿತು

ಈ ಸಂದರ್ಭದಲ್ಲಿ ತಾಯಿ ಚಾಮುಂಡೇಶ್ವರಿಯ ಭಾವಚಿತ್ರವನ್ನು ವಿವಿಧ ಬಗೆಯ ಹೂಗಳಿಂದ ಆಕರ್ಷಕವಾಗಿ ಅಲಂಕರಿಸಿ, ವಿಶೇಷ ಪೂಜೆ ಹಾಗೂ ಆರತಿ ಸಲ್ಲಿಸಲಾಯಿತು. ಭಕ್ತರು ದೇವಿಗೆ ಪೂಜೆ ಸಲ್ಲಿಸಿ ಕುಟುಂಬದ ಸುಖ, ಶಾಂತಿ ಮತ್ತು ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಸಾರ್ವಜನಿಕರಿಗೆ ಹಾಗೂ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದ್ದು, ನೂರಾರು ಮಂದಿ ಪ್ರಸಾದ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಯುವಕರು ಸೇವಾಭಾವದಿಂದ ಭಾಗವಹಿಸಿ ಅನ್ನಸಂತರ್ಪಣೆ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಯುವಕರ ಬಳಗದ ಪದಾಧಿಕಾರಿಗಳು, ಸದಸ್ಯರು, ಮಹಿಳೆಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.



## ಹರವೆ ಶ್ರೀ ಚನ್ನಬಸವೇಶ್ವರ ಪ್ರತಿಷ್ಠಾನದಿಂದ ಶ್ರೀಮಠದಲ್ಲಿ ಧಾನ್ಯ, ಪ್ರಾರ್ಥನಾ ಮಂದಿರಕ್ಕೆ ಎಚ್.ಎಂ.ಗಣೇಶ್ ಪ್ರಸಾದ್ ಗುದ್ದಲಿಪೂಜೆ

# ಶ್ರೀಮಠದ ಧಾರ್ಮಿಕ ಸೇವೆ ಅಪಾರ : ಶಾಸಕ

ಚಾಮರಾಜನಗರ,-ಹರವೆ ಭಾಗದಲ್ಲಿರುವ ಶ್ರೀ ಮಠವು ಶೈಕ್ಷಣ ಕ ಹಾಗೂ ಧಾರ್ಮಿಕವಾಗಿ ಹೆಚ್ಚಿನ ಸೇವೆ ಸಲ್ಲಿಸುವ ಜೊತೆಗೆ ಈ ಭಾಗದ ಮಕ್ಕಳಿಗೆ ಸಂಸ್ಕಾರಯುವ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ತಿಳಿಸಿದರು.

ತಾಲೂಕಿನ ಹರವೆ ಶ್ರೀ ಚನ್ನಬಸವೇಶ್ವರ ಪ್ರತಿಷ್ಠಾನದಿಂದ ಶ್ರೀ ಮಠದ ಅವರಣದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಧಾನ್ಯ ಹಾಗೂ ಪ್ರಾರ್ಥನಾ ಮಂದಿರ ನಿರ್ಮಾಣಕ್ಕೆ ಪ್ರಥಮ ಹಂತದಲ್ಲಿ 20 ಲಕ್ಷ ರೂ.ಗಳ ಅನುದಾನವನ್ನು ನೀಡಿ, ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹರವೆ ವಿರಕ್ತ ಮಠಾಧ್ಯಕ್ಷರಾದ ಶ್ರೀ ಸರ್ಪಭೂಷಣಸ್ವಾಮೀಜಿಗಳು ಈ ಭಾಗದಲ್ಲಿ ಶ್ರೀಮಠದ ಪ್ರಗತಿಯ ಜೊತೆಗೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಧಾರ್ಮಿಕವಾಗಿ ಹೆಚ್ಚಿನ ಸೇವೆಯನ್ನು ಸಲ್ಲಿಸುವ ಜೊತೆಗೆ ಚಾ.ನಗರ ಜಿಲ್ಲೆಯಲ್ಲಿಯೇ ಜನಮನ್ನಣೆಯನ್ನು ಪಡೆದುಕೊಂಡಿದ್ದಾರೆ. ನಮ್ಮ ಭಾಗದಲ್ಲಿ ಜನರು ಹೆಚ್ಚಿನ ಪ್ರಗತಿಗೆ ಇಂಥ ಮಠಗಳ ಸೇವೆಯು ಬಹಳ ಮುಖ್ಯವಾಗಿದೆ. ಹಿರಿಯ ಶ್ರೀಗಳಾದ ಶ್ರೀ ಶಿವನಂಜಸ್ವಾಮಿಗಳು ಬಹಳಷ್ಟು ಸರ್ಕಾರಿ ಕಟ್ಟಡಗಳನ್ನು ನಿರ್ಮಿಸಲು ಮಠದ ಜಾಗವನ್ನೇ ದಾನವಾಗಿ ನೀಡಿದ್ದಾರೆ. ಇಂಥ ಪರಂಪರೆಯುಳ್ಳ ಶ್ರೀಮಠವು ಇನ್ನು ಹೆಚ್ಚಿನ ಪ್ರಗತಿ ಹೊಂದಲಿ. ಶ್ರೀ ಚನ್ನಬಸವೇಶ್ವರ ಪ್ರತಿಷ್ಠಾನದ ನಡೆಯುತ್ತಿರುವ ಶಾಲೆಯು ಇನ್ನು ಹೆಚ್ಚಿನ ಪ್ರಗತಿಯನ್ನು ಹೊಂದಲಿ ಎಂದು ಆಶಿಸಿದರು. ಸುಂದರವಾದ ಧಾನ್ಯ ಮಂದಿರ ನಿರ್ಮಾಣಗೊಂಡು ಭಕ್ತರು ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡುವಂತಾಗಲಿ ಎಂದರು.



ಶ್ರೀಮಠ ಅಧ್ಯಕ್ಷರಾದ ಶ್ರೀ ಸರ್ಪಭೂಷಣ ಸ್ವಾಮೀಜಿ ಮಾತನಾಡಿ, ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರು ತಂದೆಯವರಂತೆ ಬಹಳ ಕ್ರಿಯಾಶೀಲರಾಗಿ ಕ್ಷೇತ್ರದ ಅಭಿವೃದ್ಧಿಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಹರವೆ ಭಾಗದ ಅಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಿ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಶ್ರಮಿಸುತ್ತಿದ್ದಾರೆ. ದಿ.ಎಚ್.ಎಸ್. ಮಹದೇವಪ್ರಸಾದ್ ಅವರಂತೆ ರಾಜಕೀಯವಾಗಿ ಅವರು ಇನ್ನು ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದರು. ನಮ್ಮ ಮನವಿಯಂತೆ ಧಾನ್ಯ ಮಂದಿರ ನಿರ್ಮಾಣಕ್ಕೆ ಅನುದಾನ ನೀಡುವ ಜೊತೆಗೆ ಗುದ್ದಲಿಗೆ ಪೂಜಾ ಕಾರ್ಯಕ್ಕೆ ಆಗಮಿಸಿರುವುದು ಸಂತಸ ಎಂದಿದೆ ಎಂದರು. ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ. ರವಿಕುಮಾರ್, ಜಿ.ಪಂ. ಮಾಜಿ ಸದಸ್ಯರಾದ ಕೆ.ಪಿ. ಸದಾಶಿವಮೂರ್ತಿ, ಕೆರೆಹಳ್ಳಿ ನವೀನ್, ತಾ.ಪಂ. ಮಾಜಿ ಸದಸ್ಯರಾದ ಮುಕ್ಕಡಹಳ್ಳೀ ರವಿಕುಮಾರ್, ಉದಯಕುಮಾರ್, ಪ್ರತಿಷ್ಠಾನ ಕಾರ್ಯದರ್ಶಿ ಗಿರೀಶ್, ಮುಖಂಡರಾದ ಕೇತಹಳ್ಳಿ ಶಿವಪಾದಪ್ಪ, ಮಲ್ಲಣ್ಣ, ಹಳೇಪುರ ಬೆಳ್ಳೇಗೌಡ, ಹಿರಿಬೇಗೂರು ಗುರುಸ್ವಾಮಿ, ನಟರಾಜು, ಬಸವರಾಜು, ರೇಣುಕಪ್ಪ ಮೊದಲಾದವರು ಇದ್ದರು

# ಕೆ.ಆರ್.ಪೇಟೆ ಹೇಮಾವತಿ ಜಲಾಶಯದಲ್ಲಿ 23 ಟಿಎಂಸಿ ನೀರು ಸಂಗ್ರಹ

## ಕೆರೆಯ ಕಟ್ಟೆ ತುಂಬಿಸಲು ನೀರು ಹರಿಸಿ; ಇಲ್ಲವಾದರೆ ರೈತರೊಂದಿಗೆ ಹೋರಾಟ



**ಕೆ.ಆರ್.ಪೇಟೆ:** ಹೇಮಾವತಿ ಜಲಾಶಯದಲ್ಲಿ 23 ಟಿಎಂಸಿ ನೀರು ಸಂಗ್ರಹವಾಗಿದ್ದು, ಕೂಡಲೆ ಹಾಸನ ಉಸ್ತುವಾರಿ ಸಚಿವರು ಹೇಮಾವತಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ಸಾಹುಕಾರ್ ಚನ್ನಯ್ಯ ನಾಲೆಗಳಿಗೆ ನೀರು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸಬೇಕು. ಇಲ್ಲವಾದರೆ ಸರ್ಕಾರದ ವಿರುದ್ಧ ರೈತರೊಂದಿಗೆ ಬೀದಿಗಿಳಿದು ರೈತರ ಪರವಾಗಿ ಹೋರಾಟ ನಡೆಸಲಾಗುವುದು ಎಂದು ಶಾಸಕ ಹೆಚ್.ಟಿ. ಮಂಜು ಎಚ್ಚರಿಕೆ ನೀಡಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಹೇಮಾವತಿ ನೀರಾವರಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ನಂತರ ನಡೆದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಲಸಂಪನ್ಮೂಲ ಸಚಿವರಾದ ರಾಮಲಿಂಗಾರೆಡ್ಡಿ ಅವರೊಂದಿಗೆ ದೂರವಾಣಿ ಕರೆ ಮಾಡಿ ಈ ಕುರಿತು ಚರ್ಚೆ ನಡೆಸಿದ್ದು, ಆದಷ್ಟು ಬೇಗ ಹೇಮಾವತಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಲು ಹಾಸನ ಜಿಲ್ಲಾಡಳಿತ ಹಾಗೂ ಉಸ್ತುವಾರಿ ಸಚಿವರಿಗೆ ಸೂಚನೆ ನೀಡುತ್ತೇನೆ. ನಿಮ್ಮ ಬೇಡಿಕೆಯಂತೆ ಕೆ.ಆರ್.ಪೇಟೆ ತಾಲ್ಲೂಕಿನ ಕೆರೆಕಟ್ಟೆಗಳನ್ನು ತುಂಬಿಸಲು ಕ್ರಮ ವಹಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಮಂದಗೆರೆ ಎಡ ಮತ್ತು ಬಲದಂಡೆ ನಾಲೆಗಳು ಹಾಗೂ ಹೇಮಗಿರಿ ಅಣೆಕಟ್ಟುಗಳು ಕೆ.ಆರ್.ಎಸ್ ಹಾಗೂ ಹೇಮಾವತಿ ಜಲಾಶಯಗಳ ನಿರ್ಮಾಣಕ್ಕೂ ಮುನ್ನವೇ ಮೈಸೂರು ಮಹಾರಾಜ ಕಾಲದ ಅವಧಿಯಲ್ಲಿ ನಿರ್ಮಾಣವಾಗಿರುವುದರಿಂದ ಅವುಗಳಿಗೆ ಜಲವಿವಾದದ ತಕರಾರು ಅನ್ವಯಿಸುವುದಿಲ್ಲ. ಆದರೂ ಅಧಿಕಾರಿಗಳು ರೈತರಿಗೆ ಬೆಳೆ ಬೆಳೆಯದಂತೆ ಪ್ರಕಟಣೆ ನೀಡಿರುವುದು ಸರಿಯಲ್ಲ ಎಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಕೂಡಲೇ ಎಂದಿನಂತೆ ವಾರ್ಷಿಕ ಎರಡು ಬೆಳೆ ಬೆಳೆಯಲು ನೀರು ಹರಿಸಬೇಕು. ಹಾಗಾಗಿ

ತಕ್ಷಣವೇ ಈ ನಾಲೆಗಳಿಗೆ ನೀರು ಹರಿಸಿದರೆ ರೈತರು ಸಮಯಕ್ಕೆ ಕೃಷಿ ಚಟುವಟಿಕೆ ಆರಂಭಿಸಬಹುದು. ವಿಳಂಬವಾದರೆ ಹವಾಮಾನ ವೈಪರೀತ್ಯದಿಂದ ಉತ್ತಮ ಇಳುವರಿ ಪಡೆಯುವುದು ಕಷ್ಟವಾಗಲಿದೆ ಎಂದು ಹೇಳಿದರು. ಜೊತೆಗೆ

ಸಾಹುಕಾರ್ ಚನ್ನಯ್ಯ ನಾಲೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ತಾಲ್ಲೂಕಿನ 90ಕ್ಕೂ ಕೆರೆ ಕಟ್ಟೆಗಳನ್ನು ತುಂಬಿಸುವಂತೆ ಆಗ್ರಹಿಸಿದ ಅವರು, ರೈತರ ಹಿತದೃಷ್ಟಿಯಿಂದ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ರೈತರೊಂದಿಗೆ ಸೇರಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಆರು ತಿಂಗಳ ಹಿಂದೆಯೇ ನಾಲೆಗಳ ಸಿಲ್ಟ್ ಹಾಗೂ ಜಂಗಲ್ ತೆರವು ಕಾಮಗಾರಿ ಪೂರ್ಣಗೊಳಿಸಿ ನೀರು ಹರಿಯಲು ಅಗತ್ಯ ಸಿದ್ಧತೆ ಮಾಡಬೇಕಾಗಿತ್ತು. ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ವಿಳಂಬವಾಗಿದೆ. ಕೂಡಲೇ ಸಿಲ್ಟ್ ಹಾಗೂ ಜಂಗಲ್ ತೆರವು ಕಾರ್ಯ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ವಳಗೆರೆ ಮೆಣಸ ಕೆರೆಯಲ್ಲಿ 20ಕ್ಕೂ ಹೆಚ್ಚು ಎಕರೆ ಪ್ರದೇಶ ಒತ್ತುವರಿಯಾಗಿರುವುದನ್ನು ತಾವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವುದಾಗಿ ತಿಳಿಸಿದ ಶಾಸಕ ಮಂಜು, ರೈತರು ಕೆರೆ ಒತ್ತುವರಿಗೆ ಮುಂದಾಗಬಾರದು. ಕೆರೆ ಒತ್ತುವರಿಯಿಂದ ಸುತ್ತಮುತ್ತಲಿನ ಅಂತರ್ಜಲ ಮಟ್ಟ ಕುಸಿಯುವ ಅಪಾಯವಿದ್ದು, ಅದರ ಬದಲು ತಮ್ಮ ಜಮೀನಿನಲ್ಲಿ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಬೆಳೆ ಬೆಳೆಯುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಹೇಮಾವತಿ ನೀರಾವರಿ ಇಲಾಖೆಯ ನಂ.03ರ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಸೇರಿದಂತೆ ವಿವಿಧ ವಿಭಾಗಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಉಪಸ್ಥಿತರಿದ್ದರು.

### ಮುಖ್ಯಾಂಶಗಳು

- ಹೇಮಾವತಿ ಜಲಾಶಯದಲ್ಲಿ 23 ಟಿಎಂಸಿ ನೀರು ಸಂಗ್ರಹ
- ಕೆರೆಕಟ್ಟೆ ತುಂಬಿಸಲು ಸಚಿವರಿಂದ ಭರವಸೆ
- ನೀರಾವರಿ ಸಲಹಾ ಸಮಿತಿ ಸಭೆ ಕರೆಯಲು ಮನವಿ
- ಮಂದಗೆರೆ ಎಡ-ಬಲ ದಂಡೆ ನಾಲೆಗಳಿಗೆ ನೀರು ಹರಿಸಲು ಆಗ್ರಹ
- ಸಾಹುಕಾರ್ ಚನ್ನಯ್ಯ ನಾಲೆ ಮೂಲಕ ಕೆರೆಕಟ್ಟೆ ತುಂಬಿಸಲು ಒತ್ತಾಯ
- ನಾಲೆಗಳ ಸಿಲ್ಟ್, ಜಂಗಲ್ ತೆರವು ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಸೂಚನೆ
- ವಳಗೆರೆ ಮೆಣಸ ಕೆರೆಯ ಒತ್ತುವರಿ ತೆರವಿಗೆ ಕ್ರಮಕ್ಕೆ ಆಗ್ರಹ
- ಬೇಡಿಕೆ ಈಡೇರದಿದ್ದರೆ ರೈತಪರ ಹೋರಾಟದ ಎಚ್ಚರಿಕೆ ನೀಡಿದರು.

# ಆಧುನಿಕ ಮೈಸೂರು ನಿರ್ಮಾಣಕ್ಕೆ ಕೆಂಪನಂಜಮ್ಮಣ್ಣಿ ಅವರ ಕೊಡುಗೆ ಅಪಾರ



**ಚಾಮರಾಜನಗರ:** ಆಧುನಿಕ ಮೈಸೂರು ನಿರ್ಮಾಣಕ್ಕೆ ಭದ್ರಬುನಾದಿ,ಮಾರ್ಗದರ್ಶನ ನೀಡಿ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದವರು ರಾಜಮಾತೆ ಶ್ರೀಮತಿ ಕೆಂಪನಂಜಮ್ಮಣ್ಣಿ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಮೈಸೂರು ರಾಜ ಮಾತೆ ಶ್ರೀಮತಿ ಕೆಂಪನಂಜಮ್ಮಣ್ಣಿ ರವರ ಕೊಡುಗೆಗಳು ಕುರಿತು ವಿಚಾರ ಸಂಕೀರ್ಣದಲ್ಲಿ ಮಾತನಾಡುತ್ತಾ ಆಧುನಿಕ ಮೈಸೂರು ನಿರ್ಮಾಪಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯಾಗಿ, ಅಪ್ರಾಪ್ತ ವಯಸ್ಕರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪರವಾಗಿ ರಾಜ ಪ್ರತಿನಿಧಿಯಾಗಿ ಮಹಾರಾಣಿ ಅವರು ನಾಲ್ವಡಿ ರವರಿಗೆ ಉತ್ತಮ ಶಿಕ್ಷಣವನ್ನು ನೀಡಿದರು ಎಂದು ಹೇಳಿದರು. ಮಹಿಳೆಯಾಗಿ, ತಾಯಿಯಾಗಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮಹಾತಾಯಿ. ಪ್ರಜೆಗಳ ಕಲ್ಯಾಣದ ಆಡಳಿತದ ಗುರಿಯನ್ನು ಹೊಂದಿದ್ದ ತಮ್ಮ ದೂರ ದೃಷ್ಟಿ, ಜ್ಞಾನ ದೃಷ್ಟಿಯ ಮೂಲಕ ಮೈಸೂರು ಸಂಸ್ಥಾನ ಇಡೀ ಜಗತ್ತಿನಲ್ಲಿ ಮಾದರಿ ರಾಜ್ಯವಾಗಲು ಅಡಿಪಾಯ ಹಾಕಿದರು ರಾಜಮಾತೆ. ಶಿಕ್ಷಣ, ಸಾರ್ವಜನಿಕ ಆರೋಗ್ಯ, ಮಹಿಳಾ ವಸತಿ ಶಾಲೆ ಕಾಲೇಜು,ವಾಣಿವಿಲಾಸ ಅಣೆಕಟ್ಟು ವಿಕ್ಟೋರಿಯಾ ಆಸ್ಪತ್ರೆ, ಮಾರಿ ಕಣಿವೆ ಯೋಜನೆ, ಕೋಲಾರದ ಚಿನ್ನದ ಗಣಿ ಅಭಿವೃದ್ಧಿ, ಕೃಷಿ, ಕೈಗಾರಿಕೆ, ಮೈಸೂರು ಬೆಂಗಳೂರಿಗೆ ಶುದ್ಧ ನೀರು, ಬಾಲ್ಯ ವಿವಾಹರದ್ದು, ಕ್ಷಯ ರೋಗ ಆಸ್ಪತ್ರೆ ನಿರ್ಮಾಣ, ನಗರಾಭಿವೃದ್ಧಿ, ಕೆ ಆರ್ ಎಸ್ ನಿರ್ಮಾಣದ ಸಂದರ್ಭದಲ್ಲಿ ಹಣಕಾಸಿನ ಮುಗ್ಗಟ್ಟು ಉಂಟಾದಾಗ ತಮ್ಮ ಆಭರಣಗಳೆಲ್ಲವನ್ನು ನೀಡಿ ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣಕ್ಕೆ ಸ್ಪೂರ್ತಿ ತುಂಬಿ ದರು ಎಂದು ಬಣ್ಣಿಸಿದರು.

ಮಹಾರಾಣಿಯವರ ನಿರ್ಮಲ ಮನಸ್ಸು ಮಾದರಿ.ನೂರಾರು ಸೇವೆಗಳನ್ನು ಸಲ್ಲಿಸಿ ಜಗತ್ತಿಗೆ ಮಾದರಿಯಾದ ಕೆಂಪನಂಜಮ್ಮಣ್ಣಿ ಯವರ ಇತಿಹಾಸ ಯುವ ಪೀಳಿಗೆಗೆ ತಿಳಿಯಬೇಕು. ಝಾನ್ಸಿ ರಾಣಿ ಲಕ್ಷ್ಮೀಬಾಯಿ,ಚೆನ್ನಭೈರಾ ದೇವಿ, ರಾಣಿ ಪದ್ಮಾವತಿ, ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮನ ಇತಿಹಾಸ ಹೋರಾಟವನ್ನು ಪ್ರತಿಯೊಬ್ಬರು ತಿಳಿದಿದ್ದೇವೆ.

ಮೈಸೂರು ರಾಜ್ಯದ ಸಮಗ್ರ ಅಭಿವೃದ್ಧಿಗೆ ಭಾರತೀಯತೆಯ ಬೇರನ್ನು ಬಿಡದೆ,ಕನ್ನಡ ನಾಡು ನುಡಿ,ಜಲ,ಭಾಷೆ,ಸಂಸ್ಕೃತಿ ಪರಂಪರೆ ಬುನಾದಿಯ ಮೇಲೆ ಪಾಶ್ಚಿಮಾತ್ಯರ ಬ್ರಿಟಿಷರ ನೀತಿ ಮತ್ತು ಅವರ ಪ್ರಭಾವದ ನಡುವೆಯೂ ಆಧುನಿಕ ಭಾರತದ ನಿರ್ಮಾಣವನ್ನು ಮಾಡಿದ ಕೆಂಪನಂಜಮ್ಮಣ್ಣಿ ರವರು ಆದರ್ಶ.

ಯುವ ಪೀಳಿಗೆ ಹಾಗೂ ವಿದ್ಯಾರ್ಥಿಗಳು ಪರಂಪರೆಯ ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆಯ ಅಧ್ಯಯನ ಮಾಡಬೇಕು. ಚರಿತ್ರೆಯ ಮಹಾನ್ ಸಾಧಕರ ಜೀವನ ಮೌಲ್ಯಗಳು ಬಗ್ಗೆ ಆಸಕ್ತಿ ಮತ್ತು ಕುತೂಹಲ ಮತ್ತು ಅರಿವಿನ ದೃಷ್ಟಿಯಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ನಾವೆಲ್ಲರೂ ಸೇರಿ ಮಾಡಬೇಕು ಎಂದು ತಿಳಿಸಿದರು.

ನಿವೃತ್ತ ಶಿಕ್ಷಕರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಶ್ರೀಮತಿ ಸರಸ್ವತಿ ಕೆಂಪನಂಜಮ್ಮಣ್ಣಿ ಯವರ ಭಾವಚಿತ್ರಕ್ಕೆ ಪುಷ್ಪವನ್ನು ಅರ್ಪಿಸಿ ಉದ್ಘಾಟಿಸಿ ಶುಭ ಕೋರಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬಿಕೆ ಆರಾಧ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಪದ್ಮ ಪುರುಷೋತ್ತಮ್, ಶಿವಲಿಂಗ ಮೂರ್ತಿ,ರವಿಚಂದ್ರ ಪ್ರಸಾದ ಕಹಳೆ,ಪೃಥ್ವಿ,ಮೋಹನ್, ಮಹೇಂದ್ರ,ಮಹೇಶ್,ಪ್ರಕಾಶ್ ಹಾಜರಿದ್ದರು.

# 9ರಂದು ಲೋಕಸಿರಿ ತಿಂಗಳ ಅತಿಥಿ–119 ಕಾರ್ಯಕ್ರಮ

**ರಾಮನಗರ:** ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ ಲೋಕಸಿರಿ ತಿಂಗಳ ಅತಿಥಿ–119, ನಾಡೋಜ ಎಚ್. ಎಲ್ ನಾಗೇಗೌಡರ ನೆನಪಿನ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ? ಕಾರ್ಯಕ್ರಮವನ್ನು ಆ.9ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ರಾಮನಗರದ ಜಾನಪದ ಲೋಕದಲ್ಲಿ ಏರ್ಪಡಿಸಲಾಗಿದೆ.

ಲೋಕಸಿರಿ ತಿಂಗಳ ಅತಿಥಿ ಕಾರ್ಯಕ್ರಮದ ಗೌರವ–ಮಾತುಕತೆ–ಸಂವಾದದಲ್ಲಿ ಅತಿಥಿಯಾಗಿ ಪಟಕುಣಿತ ಕಲಾವಿದರಾದ ಕಾಡಪ್ಪ ಅವರು ಭಾಗವಹಿಸಲಿದ್ದಾರೆ.

ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಗೌರವ ಉಪಸ್ಥಿತಿ ವಹಿಸುವರು. ಜನಪದ ನೃತ್ಯ ಕಲಾವಿದರಾದ ಎಸ್. ರೇಣುಕಾಪ್ರಸಾದ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ಆರೋಗ್ಯದ ಅಡಿಪಾಯ ಹದಿಹರೆಯವೇ ನಿರ್ಣಾಯಕ



ಡಾ.ಈರಪ್ಪ ಲಕ್ಷ್ಮಣ ಘಸ್ತಿ.




ಹದಿಹರೆಯ 10 ರಿಂದ 19 ವರ್ಷದವರೆಗಿನ ಜೀವನದ ಅತ್ಯಂತ ಪ್ರಮುಖ ಹಂತ. ಈ ಅವಧಿಯಲ್ಲಿ ದೇಹದ ಬೆಳವಣಿಗೆ, ಮೆದುಳಿನ ಬೆಳವಣಿಗೆ ಮತ್ತು ಭಾವನಾತ್ಮಕ ಬದಲಾವಣೆಗಳು ಅತ್ಯಂತ ವೇಗವಾಗಿ ನಡೆಯುತ್ತವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಈ ಸಮಯದಲ್ಲಿ ರೂಪುಗೊಳ್ಳುವ ಅಭ್ಯಾಸಗಳು ವ್ಯಕ್ತಿಯ ಜೀವನಪೂರ್ತಿ ಆರೋಗ್ಯದ ಅಡಿಪಾಯವಾಗುತ್ತವೆ. ಆದ್ದರಿಂದ ಹದಿಹರೆಯದಲ್ಲಿ ಆರೋಗ್ಯ ಜಾಗೃತಿ ಅತ್ಯಗತ್ಯ.

ದೈಹಿಕ ಆರೋಗ್ಯದ ವಿಚಾರದಲ್ಲಿ, ಈ ವಯಸ್ಸಿನಲ್ಲಿ ಮೂಳೆಗಳ ಸಾಂದ್ರತೆ ಮತ್ತು ಸ್ನಾಯುಗಳ ಬೆಳವಣಿಗೆ ಹೆಚ್ಚಾಗಿರುತ್ತದೆ. ಆದ್ದರಿಂದ ಕಬ್ಬಿಣ,ಕ್ಯಾಲ್ಸಿಯಂ, ಪ್ರೋಟೀನ್,ವಿಟಮಿನ್ ಡಿ ಮತ್ತು ಫೈಬರ್ ಇರುವ ಸಮತೋಲಿತ ಆಹಾರ ಅಗತ್ಯ. ಜಂಕ್ ಫುಡ್ ಅತಿಯಾದ ಸೇವನೆಯಿಂದ ಬೊಜ್ಜು ಮತ್ತು ರಕ್ತಹೀನತೆ ಕಾಣಿಸಿಕೊಳ್ಳಬಹುದು. ದಿನಕ್ಕೆ ಕನಿಷ್ಠ 60 ನಿಮಿಷಗಳ ಆಟ ಅಥವಾ ವ್ಯಾಯಾಮ, 8 ರಿಂದ 9 ಗಂಟೆಗಳ ನಿದ್ರೆ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿ. ವೈಯಕ್ತಿಕ ಸ್ವಚ್ಛತೆ, ಋತುಚಕ್ರದ ಆರೋಗ್ಯ ಮತ್ತು ನಿಯಮಿತ ಆರೋಗ್ಯ ತಪಾಸಣೆ ಬಗ್ಗೆ ಅರಿವು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯ ಸಹ ಅಷ್ಟೇ ಮುಖ್ಯ. ನ್ಯೂರೋ ಸೈನ್ಸ್ ಪ್ರಕಾರ, ಹದಿಹರೆಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಮೆದುಳಿನ ಭಾಗವಾದ ಪ್ರಿಫ್ರಂಟಲ್ ಕಾರ್ಟೆಕ್ಸ್ ಇನ್ನೂ ಪೂರ್ಣವಾಗಿ ಬೆಳೆದಿರುವುದಿಲ್ಲ. ಇದರಿಂದ ಒತ್ತಡ, ಆತಂಕ ಮತ್ತು ಸ್ನೇಹಿತರ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು. ಧ್ಯಾನ, ಕ್ರೀಡೆ, ಕಲೆ ಮತ್ತು ಹಿರಿಯರೊಂದಿಗೆ ಮುಕ್ತ ಸಂಭಾಷಣೆಯಿಂದ ಮಾನಸಿಕ ಸ್ಥಿರತೆ ಕಾಪಾಡಿಕೊಳ್ಳಬಹುದು.

ಡಿಜಿಟಲ್ ಮತ್ತು ಸಾಮಾಜಿಕ ಆರೋಗ್ಯ ಇಂದಿನ ಅನಿವಾರ್ಯ. ಅತಿಯಾದ ಮೊಬೈಲ್ ಬಳಕೆ, ನಿದ್ರಾಹೀನತೆ ಮತ್ತು ಏಕಾಗ್ರತೆಯ ಕೊರತೆಗೆ ಕಾರಣವಾಗುತ್ತದೆ. ಸೈಬರ್ ಬುಲ್ಲಿಯಿಂಗ್, ತಪ್ಪು ಮಾಹಿತಿ ಮತ್ತು ಆನ್‌ಲೈನ್ ಸುರಕ್ಷತೆಯ ಬಗ್ಗೆ ಅರಿವು ಇರಬೇಕು. ಉತ್ತಮ ಸ್ನೇಹ, ಗೌರವ ಮತ್ತು ಜವಾಬ್ದಾರಿಯುತ ನಡವಳಿಕೆ ಸಾಮಾಜಿಕ ಆರೋಗ್ಯವನ್ನು ಬಲಪಡಿಸುತ್ತದೆ.

ಜೊತೆಗೆ ಮಾದಕ ದ್ರವ್ಯಗಳ ದುಷ್ಪರಿಣಾಮ, ರಸ್ತೆ ಸುರಕ್ಷತೆ ಮತ್ತು ವೈಜ್ಞಾನಿಕ ಆರೋಗ್ಯ ಶಿಕ್ಷಣದ ಬಗ್ಗೆ ಸರಿಯಾದ ಮಾಹಿತಿ ಇದ್ದರೆ ಅಪಾಯಕಾರಿ ನಡವಳಿಕೆಗಳನ್ನು ತಡೆಯಬಹುದು.

ಆರೋಗ್ಯ ಜಾಗೃತಿಯುಳ್ಳ ಹದಿಹರೆಯದವನೇ ನಾಳೆ ದೈಹಿಕವಾಗಿ ಸದೃಢ, ಮಾನಸಿಕವಾಗಿ ಸ್ಥಿರ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ನಾಗರಿಕರಾಗಿ ಸಮಾಜವನ್ನು ಕಟ್ಟುತ್ತಾರೆ.

# ಗೋಲ್‌ಕಂಬದ ಗರ್ಜನೆ: ಪದ್ಮಶ್ರೀ ಸವಿತಾ ಪುನಿಯಾ



ಡಾ.ಸುಧಾಕರ.ಜಿ.ಲಕ್ಕವಳ್ಳಿ




ಸ್ಫೂರ್ತಿ ಸುಧೆ - 90

ಎದುರಾಳಿಗಳ ಚೆಂಡು ಮಿಂಚಿನ ವೇಗದಲ್ಲಿ ಧಾವಿಸಿದಾಗ, ಇಡೀ ದೇಶದ ಉಸಿರು ನಿಂತ ಕ್ಷಣದಲ್ಲಿ ಗೋಲ್‌ಕಂಬದ ಮುಂದೆ ಗೋಡೆಯಾಗಿ ನಿಂತವರು ಸವಿತಾ ಪುನಿಯಾ. ಎಷ್ಟು ತಡೆಗಳು ರಾಷ್ಟ್ರವೀರೆಯರ ಪಟ್ಟ ತಂದುಕೊಡಬಲ್ಲವು? ಅವರಿಗೆ ಅದು ರಕ್ತ, ಬೆವರು, ಕಣ್ಣೀರಿನ ವರ್ಷಗಳ ತಪಸ್ಸು. ಭಾರತದ ಹಾಕಿ ಕಣದ "ಮಹಾಗೋಡೆ"ಗೆ ಈಗ ಪದ್ಮಶ್ರೀ ಕಿರೀಟದ ಗರಿ.

313ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳ ಅನುಭವದ ಬತ್ತಳಿಕೆಯೊಂದಿಗೆ, ಸತತ ಮೂರು ಬಾರಿ ವಿಶ್ವ ಹಾಕಿ ಒಕ್ಕೂಟದ ವರ್ಷದ ಶ್ರೇಷ್ಠ ಗೋಲ್‌ಕಾವಲುಗಾರ್ತಿ ಪ್ರಶಸ್ತಿ ಗೆದ್ದ ಏಕೈಕ ಭಾರತೀಯ ವೀರೆ ಇವರು. ಅವರ ಕೈಗವಸುಗಳಿಗೆ ಅಂಟಿದ ಪ್ರತಿ ಚೆಂಡೂ ಕೋಟ್ಯಂತರ ಕನಸುಗಳಿಗೆ ರೆಕ್ಕೆ ಕಟ್ಟಿ, ಮಹಿಳಾ ಹಾಕಿಗೆ ಹೊಸ ಭಾಷ್ಯ ಬರೆದಿತು. ಅವರ ಸ್ಥಿರತೆ ವಿಶ್ವ ಹಾಕಿ ರಂಗವನ್ನೇ ಬೆರಗುಗೊಳಿಸಿದೆ.

ಟೋಕಿಯೊ ಒಲಿಂಪಿಕ್ ಕ್ರೀಡಾಕೂಟದ ಅಂತಿಮ ಎಂಟರ ಘಟ್ಟದ ರೋಚಕ ಕ್ಷಣವನ್ನು ಯಾರು ಮರೆಯಲು ಸಾಧ್ಯ? ಬಲಿಷ್ಠ ಆಸ್ಟ್ರೇಲಿಯಾದ ಸತತ ದಾಳಿಗೆ ಎದೆಕೊಟ್ಟು ನಿಂತ ಸವಿತಾ ಪುನಿಯಾ ಅವರು, ಒಂಬತ್ತು ದಂಡನೆ ಮೂಲೆ ಹೊಡೆತಗಳನ್ನು ವಿಫಲಗೊಳಿಸಿದರು. ಆ ಒಂದು ಪಂದ್ಯ ಭಾರತವನ್ನು 41 ವರ್ಷಗಳ ನಂತರ ಉಪಾಂತ್ಯ ಘಟ್ಟದ ಹೊಸ್ತಿಲಿಗೆ ತಲುಪಿಸಿತು. ದೂರದರ್ಶನದ ಮುಂದೆ ಕುಳಿತ ಭಾರತದ ಎದೆ ಹೆಮ್ಮೆಯಿಂದ ಬೀಗಿ, ಕಣ್ಣಾಲಿಗಳು ತುಂಬಿ ಬಂದವು.

ಪದ್ಮಶ್ರೀ ಕೇವಲ ಪ್ರಶಸ್ತಿಯಲ್ಲ, ಅದು ಛಲದ ಪ್ರತೀಕ. ಹರಿಯಾಣದ ಹಳ್ಳಿಯ ಮಣ್ಣಿನಿಂದ ಹೊರಟ ಹೆಣ್ಣುಮಗಳು ವಿಶ್ವ ಹಾಕಿಯ ಶಿಖರ ಏರಿದ ಸಾಹಸಗಾಥೆ ಇದು. ಅವರ ಪ್ರತಿ ಜಿಗಿತ, ಪ್ರತಿ ನೆಗೆತ ಯುವ ಭಾರತಕ್ಕೆ ಹೇಳುವ ಸಂದೇಶ ಒಂದೇ: ಕನಸು ಕಾಣಿ, ಕಾದಾಡಿ, ಗೆದ್ದು ತೋರಿಸಿ. ಸವಿತಾ ಪುನಿಯಾ ಎಂಬ ಹೆಸರು ಇನ್ನು ಮುಂದೆ ಕೇವಲ ಆಟಗಾರ್ತಿಯಲ್ಲ, ಅದು ಸ್ಫೂರ್ತಿಯ ಮಹಾಕಾವ್ಯ.

# ಸೋಲುಗಳು ಸೋಲಿಸಲಾರವು? ಗೆಲುವು ಮೆಟ್ಟಿಲಾಗಬಹುದು



ಉಮೇಶ ಸರ್ಪನಕಟ್ಟೆ



ಬದುಕು ಎಂದಿಗೂ ಒಂದೇ ರೀತಿಯಲ್ಲಿ ಸಾಗುವುದಿಲ್ಲ. ಕೆಲವೊಮ್ಮೆ ಎಲ್ಲವೂ ನಮ್ಮ ಪರವಾಗಿದ್ದರೆ, ಇನ್ನೂ ಕೆಲವೊಮ್ಮೆ ಎಲ್ಲವೂ ವಿರುದ್ಧವಾಗಿ ನಡೆಯುತ್ತದೆ. ನಾವು ಎಷ್ಟೇ ಶ್ರಮಪಟ್ಟರೂ ಫಲಿತಾಂಶ ನಮ್ಮ ನಿರೀಕ್ಷೆಯಂತೆ ಬಾರದ ಸಂದರ್ಭಗಳು ಬರುತ್ತವೆ. ಆ ಕ್ಷಣದಲ್ಲಿ ಮನಸ್ಸು ಕುಗ್ಗುವುದು ಸಹಜ. ಆದರೆ ಜೀವನದ ದೊಡ್ಡ ಸತ್ಯವೆಂದರೆ ಸೋಲು ಶಾಶ್ವತವಲ್ಲ; ಅದನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಎಂಬುದೇ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ.

ಅನಿರೀಕ್ಷಿತ ಸೋಲುಗಳು ನಮ್ಮನ್ನು ಹತಾಶೆಗೊಳಿಸುತ್ತವೆ. ಕೆಲವು ಸೋಲುಗಳು ನಮ್ಮ ಆತ್ಮವಿಶ್ವಾಸವನ್ನೇ ಅಲುಗಾಡಿಸುತ್ತವೆ. "ನನ್ನಿಂದ ಏನೂ ಆಗುವುದಿಲ್ಲ" ಎಂಬ ಭಾವನೆ ಮೂಡಬಹುದು. ಆದರೆ ಪ್ರತಿಯೊಂದು ಸೋಲಿನ ಹಿಂದೆ ಒಂದು ಪಾಠ ಅಡಗಿರುತ್ತದೆ. ಆ ಪಾಠವನ್ನು ಅರಿತು ಮುಂದೆ ಸಾಗುವವನೇ ನಿಜವಾದ ವಿಜೇತ. ಸೋಲು ನಮ್ಮ ಸಾಮರ್ಥ್ಯವನ್ನು ಅಳೆಯುವುದಿಲ್ಲ; ಅದು ನಮ್ಮ ತಾಳ್ಮೆ, ಧೈರ್ಯ ಮತ್ತು ದೃಢ ಸಂಕಲ್ಪವನ್ನು ಪರೀಕ್ಷಿಸುತ್ತದೆ.

ಯಶಸ್ಸು ಯಾರಿಗೂ ಒಂದೇ ದಿನದಲ್ಲಿ ಸಿಗುವುದಿಲ್ಲ. ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯ ಬದುಕಿನ ಹಿಂದೆ ಅನೇಕ ಪ್ರಯತ್ನಗಳು, ಅನೇಕ ವಿಫಲತೆಗಳು ಮತ್ತು ಅನೇಕ ಕಣ್ಣೀರುಗಳ ಕಥೆ ಇರುತ್ತದೆ. ಹೊರಗಿನ ಜಗತ್ತಿಗೆ ಕಾಣುವುದು ಅವರ ಯಶಸ್ಸು ಮಾತ್ರ; ಆದರೆ ಅವರಿಗೆ ಮಾತ್ರ ಗೊತ್ತಿರುತ್ತದೆ ಆ ಯಶಸ್ಸಿನ ಹಿಂದೆ ಎಷ್ಟು ಕಠಿಣ ಹೋರಾಟ ಅಡಗಿದೆ ಎಂದು.

ಸೋತವರ ಕಥೆಗಳೇ ಅನೇಕ ಬಾರಿ ಗೆಲುವಿನ ದಾರಿಯನ್ನು ಸೃಷ್ಟಿಸುತ್ತವೆ. ಇತಿಹಾಸದಲ್ಲಿ ಕೆಲವೊಮ್ಮೆ ಗೆದ್ದವರಿಗಿಂತ ಸೋತು ಮತ್ತೆ ಎದ್ದು ನಿಂತವರ ಕಥೆಗಳೇ ಹೆಚ್ಚು ಜನರ ಮನಸ್ಸಿನಲ್ಲಿ ಉಳಿದಿರುತ್ತವೆ. ಮಹಾಭಾರತದ ಕರ್ಣನು ಅದಕ್ಕೆ ಉತ್ತಮ ಉದಾಹರಣೆ. ಅವನ ಜೀವನ ಅನೇಕ ಸಂಕಷ್ಟಗಳಿಂದ ಕೂಡಿದ್ದರೂ, ಅವನ ದಾನಶೀಲತೆ, ನಿಷ್ಠೆ ಮತ್ತು ಧೈರ್ಯ ಇಂದಿಗೂ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ. ಅವನ ಬದುಕು ಪ್ರತಿಯೊಬ್ಬರಿಗೂ ಹೋರಾಟದ ಅರ್ಥವನ್ನು ತಿಳಿಸುತ್ತದೆ.

ಅಬ್ರಹಾಂ ಲಿಂಕನ್ ಅವರ ಜೀವನ ಮತ್ತೊಂದು ಮಹಾನ್ ಉದಾಹರಣೆ. ರಾಜಕೀಯ, ವ್ಯಾಪಾರ ಮತ್ತು ವೈಯಕ್ತಿಕ ಬದುಕಿನಲ್ಲಿ ಅನೇಕ ಸೋಲುಗಳನ್ನು ಕಂಡರೂ ಅವರು ಕೈಚೆಲ್ಲಲಿಲ್ಲ. ಪ್ರತಿಯೊಂದು ಸೋಲಿನ ನಂತರ ಮತ್ತೆ ಎದ್ದು ನಿಂತರು. ಕೊನೆಗೆ ಅಮೆರಿಕದ ರಾಷ್ಟ್ರಪತಿಯಾಗಿ ಇತಿಹಾಸದಲ್ಲಿ ತಮ್ಮ ಹೆಸರನ್ನು ಅಚ್ಚಳಿಯದಂತೆ ಬರೆದರು. ಅವರ ಬದುಕು ನಮಗೆ ಹೇಳುವುದು ಒಂದೇ ಮಾತು?ಸೋಲು ಅಂತ್ಯವಲ್ಲ; ಅದು ಯಶಸ್ಸಿನ ದಾರಿಯ ಒಂದು ಅಧ್ಯಾಯ ಮಾತ್ರ.

ಕ್ರಿಕೆಟ್ ಲೋಕದಲ್ಲಿ ಯುವರಾಜ್ ಸಿಂಗ್ ಅವರ ಬದುಕು ಕೂಡ ಎಲ್ಲರಿಗೂ ಪ್ರೇರಣೆ. ಕ್ಯಾನ್ಸರ್ ಎಂಬ ಭೀಕರ ಕಾಯಿಲೆಯ ವಿರುದ್ಧ ಹೋರಾಡಿ ಅದನ್ನು ಜಯಿಸಿ ಮತ್ತೆ ಮೈದಾನಕ್ಕೆ ಮರಳಿದರು. ದೈಹಿಕ ನೋವು, ಮಾನಸಿಕ ಒತ್ತಡ ಮತ್ತು ಅನೇಕ ಸವಾಲುಗಳನ್ನು ಮೀರಿ ದೇಶಕ್ಕಾಗಿ ಆಡಿದ ಅವರ ಜೀವನ ಸಾವಿರಾರು ಜನರಿಗೆ ಧೈರ್ಯ ತುಂಬಿದೆ. ಕಷ್ಟಗಳು ಎಷ್ಟೇ ದೊಡ್ಡದಾಗಿದ್ದರೂ, ದೃಢ ಸಂಕಲ್ಪ ಅದಕ್ಕಿಂತ ದೊಡ್ಡದು ಎಂಬುದನ್ನು ಅವರು ಸಾಬೀತುಪಡಿಸಿದರು.

ನಮ್ಮ ಬದುಕಿನಲ್ಲೂ ಕೆಲವರು ನಮ್ಮ ಸೋಲನ್ನು ಕಂಡು ನಗಬಹುದು. ನಮ್ಮ ಬಗ್ಗೆ ಟೀಕೆ ಮಾಡಬಹುದು. ನಮ್ಮನ್ನು ಕಡಿಮೆ ಅಂದಾಜು ಮಾಡಬಹುದು. ಆದರೆ ಅವರಿಗೆ ಉತ್ತರ ನೀಡಬೇಕಾದದ್ದು ಮಾತುಗಳಿಂದಲ್ಲ, ನಮ್ಮ ಸಾಧನೆಗಳಿಂದ. ನಾವು ಎತ್ತರಕ್ಕೆ ಬೆಳೆದಾಗ, ನಮ್ಮ ಯಶಸ್ಸೇ ಅವರ ಎಲ್ಲ ಪ್ರಶ್ನೆಗಳಿಗೆ ಉತ್ತರವಾಗುತ್ತದೆ.

ಪ್ರತಿಯೊಂದು ಸೋಲು ಹೊಸದಾಗಿ ಯೋಚಿಸಲು ಕಲಿಸುತ್ತದೆ. ಹೊಸ ದಾರಿಗಳನ್ನು ಹುಡುಕಲು ಪ್ರೇರೇಪಿಸುತ್ತದೆ. ಇನ್ನಷ್ಟು ಶ್ರಮಿಸಲು ಮನಸ್ಸನ್ನು ಸಿದ್ಧಗೊಳಿಸುತ್ತದೆ. ಆದ್ದರಿಂದ ಸೋಲನ್ನು ಶಾಪವೆಂದು ನೋಡಬೇಡಿ; ಅದು ಜೀವನದ ಅತ್ಯುತ್ತಮ ಗುರು ಎಂದು ನಂಬಿ.

ಜೀವನದಲ್ಲಿ ಯಾರೂ ಸೋಲಿಲ್ಲದೆ ಗೆದ್ದಿಲ್ಲ. ಸೋಲು ಅನುಭವಿಸಿದವರೇ ಗೆಲುವಿನ ನಿಜವಾದ ಮೌಲ್ಯವನ್ನು ಅರಿಯುತ್ತಾರೆ. ಬಿದ್ದವನು ಮತ್ತೆ ಎದ್ದು ನಡೆಯಲು ಕಲಿತಾಗ ಮಾತ್ರ ಗಮ್ಯವನ್ನು ತಲುಪುತ್ತಾನೆ. ಆದ್ದರಿಂದ ಒಂದು ಸೋಲು ನಿಮ್ಮ ಕನಸುಗಳನ್ನು ಕೊನೆಗೊಳಿಸಬಾರದು. ಅದು ನಿಮ್ಮ ಹೊಸ ಆರಂಭವಾಗಬೇಕು.

**ನೆನಪಿರಲಿ?**

ಸೋಲು ಎಂದಿಗೂ ನಮ್ಮನ್ನು ಸೋಲಿಸುವುದಿಲ್ಲ. ಸೋತ ನಂತರ ಪ್ರಯತ್ನವನ್ನು ನಿಲ್ಲಿಸಿದಾಗ ಮಾತ್ರ ನಾವು ನಿಜವಾಗಿಯೂ ಸೋಲುತ್ತೇವೆ.

ಬೀಳುವುದು ತಪ್ಪಲ್ಲ? ಬಿದ್ದಲ್ಲೇ ಉಳಿಯುವುದು ತಪ್ಪು.

ಸೋಲುವುದು ತಪ್ಪಲ್ಲ? ಮತ್ತೆ ಎದ್ದು ನಿಲ್ಲದಿರುವುದೇ ನಿಜವಾದ ಸೋಲು. ಆದ್ದರಿಂದ ಧೈರ್ಯದಿಂದ ಮುಂದೆ ಸಾಗಿರಿ. ಇಂದಿನ ಸೋಲೇ ನಾಳಿನ ಮಹಾ ಗೆಲುವಿನ ಮೊದಲ ಮೆಟ್ಟಿಲಾಗಬಹುದು.

Published by Divya R.U. Printed by M.S.Shivaprakash on behalf of Divya R.U. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandaya Dist-571401, Karnataka. Published from Divya R.U. # 227 Jnana Marga, Siddartha Nagara Mysore-570011, Karnataka. Editor Divya R.U

ಕರ್ನಾಟಕ ಸರ್ಕಾರ

# ಬರ ಪರಿಸ್ಥಿತಿ ನಿರ್ವಹಣೆಗೆ
# ಭರಪೂರ ಸಿದ್ಧತೆ





- ಎಲ್ ನೀನೋದಿಂದ ಉಂಟಾಗಿರುವ ಬರದ ಪರಿಸ್ಥಿತಿ ನಿಭಾಯಿಸಲು ಸರ್ವ ಸನ್ನದ್ಧತೆ
- ಪ್ರತಿ **ಜಿಲ್ಲೆಗೆ ಕುಡಿಯುವ ನೀರಿಗಾಗಿ ₹5 ಕೋಟಿ** ಹಾಗೂ ಪ್ರತಿ **ವಿಧಾನಸಭಾ ಕ್ಷೇತ್ರಕ್ಕೆ ₹1 ಕೋಟಿ** ಹಂಚಿಕೆ
- ಪ್ರತಿ ಜಿಲ್ಲಾಧಿಕಾರಿಗಳ ಖಾತೆಗಳಲ್ಲಿ **ಬರ ಪರಿಹಾರಕ್ಕಾಗಿ ₹329 ಕೋಟಿ**
- ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಸೃಷ್ಟಿಸಲು **ವಿಬಿ ಜಿ ರಾಮ್ ಜಿ ಯೋಜನೆ**ಯಡಿ ಕಾಮಗಾರಿಗಳ ಆರಂಭ
- ನೀರಿನ ಸೌಲಭ್ಯ ಇರುವ ರೈತರಿಗೆ **ಮೇವಿನ ಬೀಜಗಳ ವಿತರಣೆ**
- ಸರ್ಕಾರದಿಂದಲೇ ರೈತರು ಬೆಳೆದ **ಮೇವು ಖರೀದಿ**

ಗ್ಯಾರಂಟಿ ಸರ್ಕಾರ

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು


Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,